# ಅಧ್ಯಯನ 8 Study VIII

# ನೂತನ ಸೃಷ್ಟಿಯ ವಿಶ್ರಾಂತಿ ಅಥವಾ ಸಬ್ಬತ್ತು

## THE REST, OR SABBATH OF THE NEW CREATION

**ಕ್ರೂಜೆಯಿಂದ ದೈವಿಕ ವ್ಯವಹಾರದ ದಿನಾಂಕಗಳ ಬದಲಾವಣೆ – ಅಪೋಸ್ತಲರುಗಳು ಸಬ್ಬತ್ತು ದಿನಗಳಲ್ಲಿ ಯೆಹೂದ್ಯ ಮಂದಿರಗಳಲ್ಲಿ ಮಾಡಿದ ಪ್ರಸಂಗಗಳು ಯೆಹೂದ್ಯ ಸಬ್ಬತ್ತನ್ನು ದೃಢೀಕರಿಸುವುದಾಗಲೀ ಅಥವಾ ಈ ಪದ್ದತಿಯನ್ನು ನೂತನ ಸೃಷ್ಟಿಯಲ್ಲಿ ಬಂಧನಕಾರಕವನ್ನಾಗಿ ಮಾಡುವುದಾಗಲೀ ಆಗಿರಲಿಲ್ಲ – ಯಾವ ಕಟ್ಟಡದೊಳಗಿಂದ ಸುವಾರ್ತೆಯು ಸಾರಲ್ಪಡುತ್ತದೋ ಅದರ ಪ್ರಭಾವವು ಆತನ ಸಂದೇಶಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ –ಯಾವ ದಿನದಲ್ಲಿಯಾದರೂ ಸಹಾ – ಕ್ರೈಸ್ತ ಸಬ್ಬತ್ತಾಗಿ ಉದ್ಭವವಾದ ವಾರದ ಮೊದಲನೆಯ ದಿನ – ಇದರ ಆಚರಣೆಯು ಕಾನ್ಸ್ಟೆಂಟೈನಿನ ಕಾಲಕ್ಕಿಂತಲೂ ಬಹಳ ಹಿಂದೆಯೇ ಪ್ರಾರಂಭಗೊಂಡಿತ್ತು – ಪುನರುತ್ಥಾನಗೊಂಡ ಕರ್ತನ ಹೆಚ್ಚಿನ ಎಲ್ಲಾ ಪ್ರಕಟನೆಗಳೂ ವಾರದ ಮೊದಲನೆಯ ದಿನವೇ ಮಾಡಲಾಯಿತು – ಮೊದಲನೆಯ ದಿನವನ್ನು ಸಬ್ಬತ್ತಾಗಿ ಆಚರಿಸುವುದು ಕೃತಜ್ಞತೆಯ ಸಂಗತಿಯಾಗಿದೆ – ಹೀಗಿದ್ದಾಗ್ಯೂ ಇದು ದೈವಿಕ ಗೊತ್ತುಪಡಿಸುವಿಕೆ ಅಲ್ಲ – ಫ್ರಾನ್ಸ್ ಮತ್ತು ಏಳರ ಸಂಖ್ಯೆ – ಇಸ್ರಾಯೇಲ್ಯರ ಸಬ್ಬತ್ತು ಸಾಂಕೇತಿಕವಾದುದು – ನೂತನ ಸೃಷ್ಟಿಯ ಸಬ್ಬತ್ತು ಯಾವಾಗ ಪ್ರಾರಂಭವಾಯಿತು ಮತ್ತು ಅದು ಹೇಗೆ ಮುಂದುವರಿಯುತ್ತಿದೆ.**

ಹಿಂದಿನ ಅಧ್ಯಾಯದಲ್ಲಿ ನಾವು ಮಾಡಿರುವ ಧ್ಯಾನವು ಕ್ರಿಸ್ತನಲ್ಲಿರುವವರಿಗೆ ಪ್ರೀತಿಯ ನಿಯಮದಲ್ಲಿ ವ್ಯಾಪಕವಾಗಿರುವುದನ್ನು ಹೊರತುಪಡಿಸಿ ಬೇರೆ ಯಾವ ಕಾನೂನುಗಳೂ ಇಲ್ಲವೆಂದು ನಿರ್ಧಾರಾತ್ಮಕವಾಗಿ ರುಜುವಾತು ಗೊಳಿಸಲಾಗಿದೆ. ಆತ್ಮೀಕ ಇಸ್ರಾಯೇಲ್ಯರೆನಿಸಿಕೊಳ್ಳುವ ಈ ನೂತನ ಸೃಷ್ಟಿಗಳು ಧರ್ಮಶಾಸ್ತ್ರದ ಒಡಂಬಡಿಕೆಯ ನಿಬಂಧನೆಗಳಡಿ ಬರುವುದಿಲ್ಲ ಎಂಬುದನ್ನು ನಾವೀಗಾಗಲೇ ಸ್ಪಷ್ಟವಾಗಿ ತಿಳಿದುಕೊಂಡಿದ್ದೇವೆ. ನಿಬಂಧನೆಗಳ ಉಲ್ಲಂಘನೆಯ ಸಲುವಾಗಿ ನಾನೂರ ಮೂವತ್ತು ವರ್ಷಗಳ ನಂತರ ಸೇವಿಸಲ್ಪಟ್ಟ ಈ ಒಡಂಬಡಿಕೆಗೆ ಮೊದಲೇ ನೂತನ ಸೃಷ್ಟಿಗಳು ತಮ್ಮ ಪ್ರಿಯನಲ್ಲಿ ಅಂಗೀಕರಿಸಲ್ಪಟ್ಟಿದ್ದಾರೆ. ಕ್ರಿಸ್ತನು ದೇಹಧಾರಿಯಾಗಿದ್ದಾಗ ಖಂಡಿತವಾಗಿಯೂ ವಾರದ ಏಳನೆಯ ದಿನವನ್ನು ಮೋಶೆಯ ಧರ್ಮಶಾಸ್ತ್ರಕ್ಕನುಸಾರವಾಗಿ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದನಾದರೂ ಅದು ಶಾಸ್ತ್ರಿಗಳು ಫರಿಸಾಯರು ವಿರೂಪಗೊಳಿಸಿದ ಕಲ್ಪನೆಗಳಿಗನುಸಾರವಾಗಿ ಅಲ್ಲ. ಯಾಕೆಂದರೆ, ಶಾರೀರಿಕವಾಗಿ ಆತನೊಬ್ಬ ಯೆಹೂದಿ ಯಾಗಿದ್ದನು, ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿ ಜನ್ಮತಾಳಿದನು. ಇದಕ್ಕೊಳಗಾಗಿ ಆತನು ಇದರ ಎಲ್ಲಾ ಅಗತ್ಯತೆಗಳನ್ನೂ ಪೂರೈಸಿದನು. ಅಪೋಸ್ತಲನು ಹೇಳುವಂತೆ ಆತನು ಅವುಗಳನ್ನೆಲ್ಲಾ ತನ್ನೊಂದಿಗೆ ಶಿಲುಬೆಗೆ ಜಡಿದನು. ಈ ರೀತಿಯಲ್ಲಿ ಆತನು ಅವುಗಳನ್ನು ತನ್ನ ಸಲುವಾಗಿಯೂ ತನ್ನ ಮೂಲಕ ತನ್ನ ತಂದೆಯ ಬಳಿಗೆ ಬರುವ ಎಲ್ಲಾ ಯೆಹೂದ್ಯರ ಸಲುವಾಗಿಯೂ ಸಂಪೂರ್ಣವಾಗಿ ಸಮಾಪ್ತಿಗೊಳಿಸಿದನು. ಆದರೆ ಯಾರು ಕ್ರಿಸ್ತನನ್ನು ಅಂಗೀಕರಿಸದೇ ಹೋದರೋ ಅವರು ಇನ್ನೂ ಸಹಾ ಈ ಧರ್ಮಶಾಸ್ತ್ರದ ಒಡಂಬಡಿಕೆಯ ನಿಬಂಧನೆಯ ಎಲ್ಲಾ ನಿಯಮಗಳಿಗೂ ಬದ್ಧರಾಗಿರುತ್ತಾರೆ. ಆ ಬಂಧನದಿಂದ ಬಿಡುಗಡೆಯಾಗಲು ಕ್ರಿಸ್ತನನ್ನು ಅಂಗೀಕರಿಸಬೇಕು. "ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸುವ ಕ್ರಿಸ್ತನಿಂದಲೇ ಕರ್ಮಮಾರ್ಗಕ್ಕೆ ಅಂತ್ಯವಾಯಿತು" (ರೋಮಾ. 10:4) ಎಂದು ಅಪೋಸ್ತಲನು ವಿವರಿಸುತ್ತಾನೆ.

ಅನ್ಯಜನರ ಬಗ್ಗೆ ಹೇಳುವುದಾದರೆ, ನಾವೀಗಾಗಲೇ ಕಂಡುಕೊಂಡಂತೆ ಅವರು ಎಂದಿಗೂ ಮೋಶೆಯ ಧರ್ಮಶಾಸ್ತ್ರಕ್ಕೆ ಅಧೀನರಲ್ಲ ಆದುದರಿಂದ ಅವರು ಅದರಿಂದ ಬಿಡುಗಡೆ ಹೊಂದಬೇಕಾಗಿಲ್ಲ. ನಾವೀಗಾಗಲೇ ನೋಡಿದಂತೆ ನಮ್ಮ ಕರ್ತನು ನೂತನ ಸೃಷ್ಟಿಯಾಗಿ ತನ್ನ ದೀಕ್ಷಾಸ್ನಾನದಲ್ಲಿ ಅಂಕುರಗೊಂಡು ಮತ್ತು ತನ್ನ ಪುನರುತ್ಥಾನದಲ್ಲಿ ಆತ್ಮನಲ್ಲಿ ಜನಿಸುವುದರ ಮೂಲಕ ಅಬ್ರಹಾಮನ ಸಂತತಿಯ ಪ್ರತಿರೂಪವಾಗಿದ್ದಾನೆ. ಮತ್ತು ಆತನಿಗೆ ಮಾಡಿದ ಎಲ್ಲಾ ವಾಗ್ದಾನಗಳಿಗೆ ವಾರಸುದಾರನಾಗಿದ್ದಾನೆ. ನಂಬಿಕೆಯ ಮೂಲಕವಾಗಿ ಆತನ ಬಳಿಗೆ ಬರುವ ಯೆಹೂದ್ಯರಾಗಲೀ, ಅನ್ಯಜನರಾಗಲೀ ಪವಿತ್ರಾತ್ಮನಿಂದ ಜನಿಸಿದವರಾಗಿ ಅದರಂತೆ ನೂತನ ಸೃಷ್ಟಿಗಳೂ, ಕ್ರಿಸ್ತನೊಡನೆ ಅಬ್ರಹಾಮನ ಒಡಂಬಡಿಕೆಯ ಜೊತೆ ವಾರಸುದಾರರೂ ಎಂದು ಪರಿಗಣಿಸಲ್ಪಡುತ್ತಾರೆ. ಇದರ ಯಾವುದೇ ಸದಸ್ಯರೂ ಮೋಶೆಯ ನಿಬಂಧನೆಗಳಿಗೆ ಸೇರಲ್ಪಟ್ಟವರಲ್ಲ ಆದರೂ ಕ್ರಿಸ್ತನು ಧರ್ಮಶಾಸ್ತ್ರಾಧೀನನಾಗಿದ್ದು ಅದರ ನಿಬಂಧನೆಗೊಳಗಾಗಿ ಧರ್ಮಶಾಸ್ತ್ರದ ಭಾಗವಾಗಿರುವ 7ನೇ ದಿನವನ್ನು ಆಚರಿಸಿದರೂ ಇವರು ಏಳನೆಯ ದಿನವನ್ನು ಕಟ್ಟಾಜ್ಞೆಗಳ ಭಾಗವಾಗಿ ಪಾಲಿಸುವ ನಿರ್ಬಂಧನೆಗೆ ಒಳಗಾಗುವುದಿಲ್ಲ. ಇಂತಹ ನಿರ್ಬಂಧಗಳನ್ನು ಆತನ ಮತ್ತು ಆತನ ಅನುಯಾಯಿಗಳ ಪಾಲಿಗೆ ಮುಕ್ತಾಯಗೊಳಿಸಿದ್ದಾನೆ ಮತ್ತು ಆತನನ್ನು ನಂಬಿದ ಎಲ್ಲಾ ಯೆಹೂದ್ಯರ ಪಾಲಿಗೆ ಈ ನಿಯಮವನ್ನು ತನ್ನ ಮರಣದಲ್ಲಿ ನೀತಿಯುತವಾಗಿ, ನ್ಯಾಯಯುತವಾಗಿ ಮುಕ್ತಾಯಗೊಳಿಸಿದ್ದಾನೆ. ಅವರು ಒಡಂಬಡಿಕೆಯ ನಿಬಂಧನೆಗಳಿಗೆ ಸತ್ತವರಾಗಿ ಅಬ್ರಹಾಮನ ಒಡಂಬಡಿಕೆಗಳಿಗೆ ಜೀವಿಸುವವರಾಗಿದ್ದಾರೆ.

ಇದೇನು ಆಶ್ಚರ್ಯಕರವಾದುದಲ್ಲ. ಹೀಗಿದ್ದಾಗ್ಯೂ ಧರ್ಮಶಾಸ್ತ್ರದ ಹಂಚಿಕೆಯಿಂದ ಕೃಪೆಯ ಹಂಚಿಕೆ ಅಂದರೆ ಸುವಾರ್ತಾ ಯುಗಕ್ಕೆ ಬದಲಾದುದರ ಅರ್ಥದ ಬಗ್ಗೆ ಸಂಪೂರ್ಣಗ್ರಹಿಸಿಕೊಳ್ಳಲು ಅಪೋಸ್ತಲರುಗಳಿಗೆ ಕೆಲ ವರ್ಷಗಳ ಸಮಯವೇ ಬೇಕಾಯಿತು. ಅದರಂತೆ ಅವರಿಗೆ ಕ್ರಿಸ್ತನ ಮರಣದಲ್ಲಿ ಯೆಹೂದ್ಯರಿಗೂ ಅನ್ಯಜನರಿಗೂ ಇದ್ದ ಮಧ್ಯದ ಗೋಡೆಯು ಬಿದ್ದುಹೋಯಿತು, ಇನ್ನು ಮುಂದೆ ಅನ್ಯ ಜನರು ಯೆಹೂದ್ಯರಿಗಿಂತ ಅಪರಿಶುದ್ಧರು ಎಂದು ಪರಿಗಣಿಸುವಂತಿಲ್ಲ ಯಾಕೆಂದರೆ ಯೇಸುಕ್ರಿಸ್ತನು ದೇವರ ಕೃಪೆಯಿಂದ ಎಲ್ಲಾ

ಮಾನವರಿಗೂ ಅಂದರೆ ಯೆಹೂದ್ಯರಿಗೂ, ಅನ್ಯಜನರಿಗೂ ಮರಣವನ್ನು ಅನುಭವಿಸಿದನು, ಮತ್ತು ಇನ್ನುಮುಂದೆ ಯೆಹೂದ್ಯರಾಗಲೀ ಅನ್ಯಾಜನರಾಗಲೀ ಯಾರ್‍ಯಾರು ತಂದೆಯನ್ನು ಸಮೀಪಿಸುತ್ತಾರೋ ಅವರೆಲ್ಲರೂ ಆತನ ಪ್ರೀತಿದಾಯಕನ ಮೂಲಕವಾಗಿ ಅಂಗೀಕರಿಸಲ್ಪಡುತ್ತಾರೆ ಎಂಬುದನ್ನು ಗ್ರಹಿಸಲು ಅವರಿಗೆ ಬಹಳಷ್ಟು ವರ್ಷಗಳೇ ಬೇಕಾದವು. ಪೇತ್ರ ಮತ್ತು ಪೌಲರು ಅನ್ಯಜನರ ಮೇಲೆ ಸುರಿಸಲ್ಪಟ್ಟ ಪವಿತ್ರಾತ್ಮ ವರಗಳನ್ನು ಅಂದರೆ ವಾಣಿಗಳನ್ನಾಡುವ ವರ ಇತ್ಯಾದಿಗಳು ಪಂಚಾಶತ್ತಮ ದಿನದಂದು ಯೆಹೂದ್ಯರ ಮೇಲೆ ಸುರಿಸಲ್ಪಟ್ಟ ಪವಿತ್ರಾತ್ಮನ ವರಕ್ಕೆ ಸಮಾನವಾದುದೆಂದು ಪರೀಕ್ಷಿಸಿದ ಅಧಿವೇಶನದ ವರ್ಷಗಳ ನಂತರವೂ ಪೇತ್ರನು ಇನ್ನೂ ಹಿಂಜರಿಯುತ್ತಿರುವುದನ್ನು ಮತ್ತು ಯೆಹೂದ್ಯ ವಿಶ್ವಾಸಿಗಳ ದುರಾಗ್ರಹಕ್ಕೆ ಮಣಿಯುತ್ತಿರುವುದನ್ನು ಮತ್ತು ಅನ್ಯಜನರಿಂದ ಮತಾಂತರ ಹೊಂದಿದವರು ಆಶುದ್ಧರೆಂದು ಪರಿಗಣಿಸಿ ಅವರಿಂದ ದೂರ ಸರಿಯುವುದನ್ನು ನಾವು ನೋಡುತ್ತೇವೆ. ಈ ರೀತಿಯಾಗಿ ಆತನು ಪೌಲನ ಬೈಗುಳಕ್ಕೆ ತುತ್ತಾಗುತ್ತಾನೆ. ಪೌಲನು ನೂತನ ಹಂಚಿಕೆಯ ಸ್ಪಷ್ಟವಾದ ದರ್ಶನವನ್ನು ಇತರ ಅಪೋಸ್ತಲರುಗಳಿಗಿಂತ ಸ್ಪಷ್ಟವಾಗಿ ಗ್ರಹಿಸಿಕೊಂಡವನಾಗಿದ್ದನು. ಈ ರೀತಿಯಾಗಿ ಒಬ್ಬ ಅಪೋಸ್ತಲನು ತನ್ನ ಜನಾಂಗೀಯ ಪಕ್ಷಪಾತದ ಸಲುವಾಗಿ ಬೈಗುಳಕ್ಕೆ ತುತ್ತಾಗಬೇಕಾಗುವುದಾದರೆ ವಿಶ್ವಾಸಿಗಳ ಸಮೂಹವು (ಹೆಚ್ಚಾಗಿ ಎಲ್ಲಾ ಯೆಹೂದ್ಯರು) ಬಹಳ ವರ್ಷಗಳವರೆಗೆ ಕ್ರೂಜೆಯ ದಿನದಿಂದ ಬದಲಾದ ದೈವಿಕ ವ್ಯವಹಾರಗಳ ಬಗ್ಗೆ ಬಹಳಷ್ಟು ಗೊಂದಲಕ್ಕೆ ಈಡಾಗಿದ್ದರು.

ಪ್ಯಾಲಿಸ್ತೈನಿನಲ್ಲಿ ಮಾತ್ರವಲ್ಲ ಇಡೀ ಲೋಕದಲ್ಲಿ ಹರಡಿರುವ ಯೆಹೂದ್ಯರ ಸಂಪ್ರದಾಯದಲ್ಲಿ ಸಬ್ಬತ್ತಿನ ಆಚರಣೆ ಒಳಗೊಂಡಿದೆ. ಇದು ಮೂಲದಲ್ಲಿ ಒಂದು ವಿಶ್ರಾಂತಿ ದಿನ ಅಥವಾ ಶ್ರಮದ ನಿಲುಗಡೆ ಎಂದು ನೇಮಕವಾದರೂ ಧರ್ಮಶಾಸ್ತ್ರ ಮತ್ತು ಪ್ರವಾದನೆಗಳನ್ನು ಓದುವ ಮತ್ತು ಯೆಹೂದ್ಯ ಮಂದಿರಗಳಲ್ಲಿ ಪ್ರಬೋಧನೆಗಳ ದಿನವೆಂದು ಜನಪ್ರಿಯವಾಯಿತು. ಆ ದಿನದಲ್ಲಿ ಪ್ಯಾಲಿಸ್ತೈನಿನಲ್ಲಿನ ಎಲ್ಲಾ ವ್ಯವಹಾರಗಳೂ ಸ್ಥಗಿತಗೊಳ್ಳುತ್ತಿತ್ತು. ಆದುದರಿಂದ ಕ್ರೈಸ್ತತ್ವವನ್ನು ಸ್ವೀಕರಿಸಿದ ಎಲ್ಲಾ ಯೆಹೂದ್ಯರೂ ಧರ್ಮಶಾಸ್ತ್ರ ಮತ್ತು ಪ್ರವಾದನೆಗಳನ್ನು ಕ್ರಿಸ್ತನ ನೆರವೇರಿಕೆಯಲ್ಲಿ ಪ್ರಾರಂಭಗೊಂಡ ನೂತನ ದೃಷ್ಟಿಕೋನದ ಮೂಲಕ ಅಧ್ಯಯನ ಮಾಡಲು ಮತ್ತು ಕರ್ತನ ದಿನವು ಅಂದರೆ ಧರ್ಮಯುಗದ ಮಹಾ ದಿನವು – ಪ್ರಪಂಚ ಪ್ರಾರಂಭವಾದಂದಿನಿಂದ ಎಲ್ಲಾ ಪ್ರವಾದಿಗಳು ನುಡಿದ ಸಂಧಾನದ ಕಾಲಗಳು ಹತ್ತಿರವಾಗುತ್ತಿದ್ದು ಒಬ್ಬರನೊಬ್ಬರು ಆತನ ನಂಬಿಕೆಯಲ್ಲಿ ಭದ್ರವಾಗಿರುವಂತೆ ಎಚ್ಚರಿಸಿಕೊಳ್ಳಲು ಕೂಡಿಬರುತ್ತಿದ್ದರು. ಅಪೋಸ್ತಲರುಗಳು ಮತ್ತು ಪಾಲಿಸ್ತೈನಿನ ಹೊರಗಡೆ ಸಂಚಾರ ಮಾಡಿದ ಸುವಾರ್ತಿಕರು ಈಗಾಗಲೇ ಮೆಸ್ಸಿಯನನ್ನು ನಿರೀಕ್ಷಿಸುತ್ತಿದ್ದ ಯೆಹೂದ್ಯರಲ್ಲಿ ಸುವಾರ್ತೆಯನ್ನು ಕೇಳುವ ಕಿವಿಯಿರುವ ಅನೇಕರನ್ನು ಕಂಡುಕೊಂಡರು. ಇವರನ್ನು ಸಮೀಪಿಸುವ ಉತ್ತಮ ಅವಕಾಶವೆಂದರೆ ಅವರ ಏಳನೆಯ ದಿನದ ಕೂಡುವಿಕೆಯೇ ಆಗಿತ್ತು. ಏಳನೆಯ ದಿನದಲ್ಲಿ ಮೊದಲನೆಯ ದಿನಕ್ಕಿಂತ ಅಥವಾ ವಾರದ ಬೇರೆ ಯಾವ ದಿನಕ್ಕಿಂತ ಹೆಚ್ಚಾಗಿ ಸುವಾರ್ತಾ ಪ್ರಸಾರಕ್ಕೆ ದೇವರ ಪ್ರಕಟನೆಯಲ್ಲಿ ಯಾವ ಅಡ್ಡಿಯೂ ಇದ್ದಿರಲಿಲ್ಲ. ಆರಂಭದ ಸುವಾರ್ತಾ ಸೇವಕರು ದೇವರ ವಾಕ್ಯವನ್ನು ಅವರು ಹೋದ ಕಡೆಗಳಲ್ಲೆಲ್ಲಾ, ಒದಗಿಬಂದ ಎಲ್ಲಾ ಸಂಧರ್ಭಗಳಲ್ಲಿಯೂ ಅದನ್ನು ಕೇಳುವ ಕಿವಿಯುಳ್ಳವರು ಯಾರೇ ಇರಲಿ ಅವರಿಗೆ ಎಡಬಿಡದೆ ಪ್ರಸಂಗಿಸುತ್ತಿದ್ದರು ಎಂಬುದು ನಿಶ್ಚಯ.

ಕ್ರಿಸ್ತನು ಒಡಂಬಡಿಕೆಯ ನಿಬಂಧನೆಗಳನ್ನು ತನ್ನ ಶಿಲುಬೆಗೆ ಜಡಿಯುವ ಮೂಲಕ ಮುಕ್ತಾಯಗೊಳಿಸಿದನು ಎಂದು ಸಾರಿದ ಅಪೋಸ್ತಲನು ಆದಿ ಸಭೆಯವರಿಗೆ ಏಳನೆಯ ದಿನವನ್ನು ಅಥವಾ ವಾರದ ಯಾವುದೇ ಒಂದು ದಿನವನ್ನು ಸಬ್ಬತ್ತಾಗಿ ಆಚರಿಸಲೇಬೇಕಾದ ಬದ್ಧತೆಯ ಬಗ್ಗೆಯಾಗಲೀ, ಕಾನೂನಿನ ಬಗ್ಗೆಯಾಗಲೀ ಒಂದು ಮಾತನ್ನೂ ಹೇಳಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅವರು ಸಭೆಯು ಮೂಲ ಒಡಂಬಡಿಕೆಯ ಅಡಿಯಲ್ಲಿ ಒಂದು ನೂತನ ಸೃಷ್ಟಿಯೆಂದು ಭಾವಿಸಿದರು: ಹೀಗಾಗಿ ಇದು ದೇವಪುತ್ರರ ಮನೆಯಾಗಿದ್ದು ನೂತನ ಸೃಷ್ಟಿಯು ಯಾವ ಕಾನೂನಿನ ಅಧೀನದಲ್ಲಿರದೆ ಕೃಪೆಯ ಅಧೀನದಲ್ಲಿದೆಯೆಂಬ ಭಾವನೆಯನ್ನು ಗಂಭೀರವಾಗಿ ಹೊಂದಿದ್ದರು. ಈ ಸ್ಫೂರ್ತಿಭರಿತರಾದ ಬೋಧಕರು ವಿಶಿಷ್ಟವಾಗಿ ಅನೇಕ ಮಾತುಗಳಲ್ಲಿ ನೂತನ ಸೃಷ್ಟಿಗಳಿಗಿರುವ ಸ್ವಾತಂತ್ರ್ಯವನ್ನು ಎತ್ತಿ ತೋರಿಸುತ್ತಿದ್ದರು–"ಹೀಗಿರುವುದರಿಂದ ತಿಂದು ಕುಡಿಯುವ ವಿಷಯದಲ್ಲಿಯೂ ಹಬ್ಬ ಅಮವಾಸ್ಯೆ ಸಬ್ಬತ್ತು ಎಂಬಿವುಗಳ ವಿಷಯದಲ್ಲಿಯೂ ನಿಮ್ಮನ್ನು ದೋಷಿಗಳೆಂದು ಯಾರೂ ಎಣಿಸಬಾರದು. ಇವು ಮುಂದೆ ಬರಬೇಕಾಗಿದ್ದ ಕಾರ್ಯಗಳ ಛಾಯೆಯಾಗಿದೆ; ಇವುಗಳ ನಿಜಸ್ವರೂಪವು ಕ್ರಿಸ್ತನೇ" (ಕೊಲೊಸ್ಸೆ 2: 16–17).

ಹಬ್ಬಗಳು, ಉಪವಾಸಗಳು, ಕಾಲಗಳು ಮತ್ತು ದಿನಗಳು ಇವುಗಳ ಬಗ್ಗೆ ಇರುವ ಎಲ್ಲಾ ಧಾರ್ಮಿಕ ವಿಧಿಗಳೂ ಸಾಂಕೇತಿಕರಾಗಿದ್ದ ಇಸ್ರಾಯೇಲ್ಯರಿಗೆ ವಿಧಿಸಿದ ಭಾಗವಾಗಿದ್ದು ಮುಂದೆ ಆತ್ಮೀಕ ಇಸ್ರಾಯೇಲ್ಯರಿಗೆ ಅನ್ವಯವಾಗುವ ಉತ್ತಮ ಸಂಗತಿಗಳ ಛಾಯೆಯಾಗಿತ್ತು. ಯೆಹೂದ್ಯರಿಗೆ ಈ ಸಂಗತಿಗಳು ನೈಜವಾದವುಗಳು, ಅವು ಅವರಿಗೆ ಗೊತ್ತುಪಡಿಸಿದ ದೈವಿಕ ನಿರ್ಬಂಧಿತ ವಿಧಿನಿಯಮಗಳಾಗಿವೆ. ನೂತನ ಸೃಷ್ಟಿಗಳಿಗೆ ಅವುಗಳು ಕೇವಲ ಛಾಯೆಗಳಾಗಿದ್ದು ಭವ್ಯವಾದ ನೆರವೇರಿಕೆಯ ಪಾಠಗಳನ್ನು ಸೂಚಿಸುತ್ತವೆಯೇ ಹೊರತು ಹೆಚ್ಚಿನದೇನೂ ಅಲ್ಲ. ಕ್ರಿಸ್ತನ ಸುವಾರ್ತೆಯನ್ನು ಪ್ರಚುರಗೊಳಿಸುವ ಸಂಬಂಧ ಅಪೋಸ್ತಲರು ಸಬ್ಬತ್ತು ದಿನಗಳನ್ನು ಮತ್ತು ಯೆಹೂದ್ಯ ದೇವಮಂದಿರಗಳನ್ನು ಉಪಯೋಗಿಸುತ್ತಿದ್ದರು ಎಂಬ ಸತ್ಯವು ಯಾವುದೇ ಅರ್ಥದಲ್ಲಿ ಈ ಯೆಹೂದ್ಯ ಕಟ್ಟಳೆಯನ್ನು ದೃಢೀಕರಿಸುತ್ತವೆ ಮತ್ತು ಅವು ನೂತನ ಸೃಷ್ಟಿಯ ಮೇಲೆ ಹಿಡಿತ ಸಾಧಿಸುತ್ತದೆ ಅಥವಾ ಬಂಧನಕ್ಕೊಳಪಡಿಸುತ್ತವೆ ಎಂಬುದಲ್ಲ. ನಮಗೆ ಅನುಮತಿದೊರೆತಲ್ಲಿ ಇಂದು ಸಹಾ ನಾವು ಯೆಹೂದ್ಯ ಮಂದಿರಗಳಲ್ಲಿ ವಾರದ ಮೊದಲನೆಯ ದಿನ ಮಾತ್ರವಲ್ಲ, ಯೆಹೂದ್ಯರ ಸಬ್ಬತ್ತಾದ ಏಳನೆಯ ದಿನದಲ್ಲಿಯೂ ಪ್ರಸಂಗಿಸಲು ಸಂತೋಷಿಸುತ್ತೇವೆ. ಹೌದು, ನಾವು ಕ್ರಿಸ್ತನ ಬಗ್ಗೆ ಅನ್ಯರ ದೇವಾಲಯಗಳಲ್ಲಿ, ಅವರ ಪವಿತ್ರ ದಿನದಲ್ಲಿ ಬೋಧಿಸಲು ಬಹಳಷ್ಟು ಇಚ್ಛೆಯುಳ್ಳವರಾಗಿದ್ದೇವೆ. ಆದರೆ ಹಾಗೆ ಮಾಡುವಾಗ ಅವರ ಸಿದ್ಧಾಂತಗಳನ್ನು ಅಥವಾ ಅವರ ಪವಿತ್ರ ದಿನಗಳನ್ನು ನಾವು ದೃಢೀಕರಿಸುತ್ತಿದ್ದೇವೆ ಎಂಬುದಾಗಿ ಭಾವಿಸುವಂತಿಲ್ಲ.

## ನೂತನ ಸೃಷ್ಟಿಯ ವಿಶ್ರಾಂತಿ ಅಥವಾ ಸಬ್ಬತ್ತು

ಕ್ರೈಸ್ತರು ಸಾಮಾನ್ಯವಾಗಿ ಸಬ್ಬತ್ತು ಅಥವಾ ವಿಶ್ರಾಂತಿ ದಿನವನ್ನಾಗಿ ಆಚರಿಸುವ ವಾರದ ಮೊದಲನೆಯ ದಿನದ ಬಗ್ಗೆ "ಈ ದಿನವನ್ನು ರೋಮನ್ ಕೆಥೋಲಿಕ್ ಸಭೆಯ ಆಜ್ಞೆಗಳಿಗನುಸಾರ ಕ್ರೈಸ್ತ ಸಬ್ಬತ್ತು ದಿನವನ್ನಾಗಿ ಮಂಜೂರುಗೊಳಿಸಲಾಗಿದೆ" ಎಂಬ ಹೇಳಿಕೆಯು ತೀರ ತಪ್ಪಾದುದು. ಅಪೋಸ್ತಲರುಗಳು ಧೀರ್ಘನಿದ್ರೆಗೊಂಡ ಎರಡು ಶತಮಾನಗಳಿಗೂ ಹೆಚ್ಚು ಕಾಲದ ನಂತರ ಕಾನ್ಸ್ಟೆಂಟೈನನ ಕಾಲದಲ್ಲಿ ಸಂಪ್ರದಾಯಗಳು ಸಭೆಯೊಳಗೆ ಆಶ್ಚರ್ಯಕರ ಮಟ್ಟದಲ್ಲಿ ನುಸುಳಿ ಬಂದಿರುವುದು ಸತ್ಯ. ಸುಳ್ಳು ಬೋಧಕರುಗಳು ಕರ್ತನ ಅನುಯಾಯಿಗಳನ್ನು ಪಾದ್ರಿ ಆಡಳಿತಕ್ಕೆ ಒಳಪಡಿಸಲು ಕ್ರಮೇಣವಾಗಿ ಬಯಸಿದರು; ಪುರೋಹಿತ (ಪಾದ್ರಿ)ವರ್ಗದ ಲೌಕಿಕ ಧೋರಣೆಗಳು ಮತ್ತು ಅಂಧಶ್ರದ್ಧೆಗಳು ಬಹಳಷ್ಟು ಪ್ರಭಾವವನ್ನುಂಟುಮಾಡಲು ಪ್ರಾರಂಭಿಸಿದವು. ಆ ದಿನಗಳಲ್ಲಿ ಹೆಸರಿಗೆ ಮಾತ್ರ ಕ್ರೈಸ್ತರ ವಾರದ ಮೊದಲನೆಯ ದಿನವನ್ನು ಧಾರ್ಮಿಕ ಕಾರ್ಯಗಳು ಮುಂತಾದವುಗಳಿಗಾಗಿ ನಿಗಧಿಪಡಿಸುವ ನಿಯಮವೊಂದನ್ನು ಜಾರಿಗೊಳಿಸಿದ್ದು ಸತ್ಯ. ಆದರೆ ಜಿಲ್ಲಾ ಕೇಂದ್ರಗಳಲ್ಲಿ ಬೆಳೆಯನ್ನು ಕೂಡಿಸುವ ಕಾರ್ಯ ಬಹಳ ಅಗತ್ಯವಾಗಿದ್ದು ಅವರಿಗೆ ವಿನಾಯಿತಿ ನೀಡಲಾಗಿತ್ತು. ದಾಸತ್ವದ ಈ ಸಣ್ಣ ಪ್ರಾರಂಭವು ಮತ್ತು ವಾರದ ಮೊದಲನೆಯ ದಿನದ ಬಗ್ಗೆ ಇದ್ದ ಮಾಹಿತಿಯು ಯೆಹೂದ್ಯರ ಏಳನೆಯ ದಿನವನ್ನು ಸ್ಥಾನಚ್ಯುತಿಗೊಳಿಸಿತು ಎಂಬುದು ಸತ್ಯ. ಹೀಗೆ ಕ್ರಮೇಣವಾಗಿ ಏಳನೆಯ ದಿನದ ಬಗ್ಗೆ ಯೆಹೂದ್ಯರಿಗೆ ಇದ್ದ ಎಲ್ಲಾ ದೇವರ ನಿಯಮಗಳು ಕ್ರಿಸ್ತನ ಅನುಯಾಯಿಗಳಾದ ಕ್ರೈಸ್ತರಿಗೂ ವಾರದ ಮೊದಲನೆಯ ದಿನಕ್ಕೆ ಅನ್ವಯವಾಗತೊಡಗಿದವು.

ಆದರೆ, ವಾರದ ಮೊದಲನೆಯ ದಿನದ ಯುಕ್ತವಾದ ಆಚರಣೆಯು ಕಾನ್ಸ್ಟಂಟೈನಿನ ಕಾಲಕ್ಕಿಂತಲೂ ಬಹಳ ಮುಂಚೆಯೇ ಜಾರಿಯಲ್ಲಿತ್ತು. ಆದರೆ ಅದು ದಾಸತ್ವದ ರೀತಿಯಲ್ಲಿ ಅಲ್ಲ, ಸ್ವತಂತ್ರವಾದ ರೀತಿಯಲ್ಲಿ, ಸೌಕರ್ಯವಾಗಿ; ನಮ್ಮ ಕರ್ತನು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದ ದಿನ ಎಂಬ ಒಂದೇ ಕಾರಣದಿಂದ ವಾರದ ಮೊದಲನೆಯ ದಿನವು ಆತನ ಅನುಯಾಯಿಗಳಿಗೆ ಅವರುಗಳ ನಿರೀಕ್ಷೆಯುನ್ನು ಪುನರುಜ್ಜೀವಗೊಳಿಸುವ ದಿನವಾಗಿ ಆಚರಿಸುವಂತೆ ಮಾಡಿತ್ತು. ಆದರೆ ಇದಕ್ಕೆ ಆತನು ಪುನರುತ್ಥಾನ ಹೊಂದಿದ ದಿನದಂದು ತನಗೆ ಪ್ರಾಮಾಣಿಕರಾಗಿದ್ದ ಕೆಲವರನ್ನು ಸಂಧಿಸಿ ಶಾಸ್ತ್ರಗ್ರಂಥಗಳಲ್ಲಿ ತನ್ನ ಮರಣ ಪುನರುತ್ಥಾನಗಳ ಬಗ್ಗೆ ಮುಂಚಿತವಾಗಿಯೇ ಬರೆಯಲ್ಪಟ್ಟವುಗಳನ್ನು ಬೋಧಿಸಿದಾಗ ಅವರ ಹೃದಯಗಳು ಕುದಿಯಿತೆಂಬ ಅಪೋಸ್ತಲರ ಮಾತುಗಳೂ (ಲೂಕ 24:32 ನೋಡಿರಿ) ಸೇರಿಕೊಂಡವು. ಇದೆಲ್ಲವೂ ಕೂಡ ಆತನ ಇಬ್ಬರು ಶಿಷ್ಯರು ಎಮ್ಮಾಹುವಿನ ಹಾದಿಯಲ್ಲಿ ಕರ್ತನನ್ನು ಆತನು ಪುನರುತ್ಥಾನಗೊಂಡ ದಿನದಂದೇ ಸಂಧಿಸಿದಾಗ ನೆರವೇರಿತು. ಅದೇ ದಿನ ಇಬ್ಬರೂ ಮರಿಯಳರಿಗೆ ಸಮಾಧಿಯ ಬಳಿ ಕಾಣಿಸಿಕೊಂಡದ್ದಲ್ಲದೆ ಮಗ್ದಲದ ಮರಿಯಳಿಗೆ ತೋಟಗಾರನಾಗಿ ಕಾಣಿಸಿಕೊಂಡಿದ್ದು, ಮತ್ತು ಅಂದಿನ ಸಂಜೆಯಲ್ಲಿ ಆತನು ತನ್ನ ಎಲ್ಲಾ ಶಿಷ್ಯರೂ (ಒಬ್ಬನನ್ನು ಹೊರತು ಪಡಿಸಿ) ಒಂದು ಮನೆಯಲ್ಲಿ ಕೂಡಿಬಂದಿದ್ದಾಗ ಅವರ ಮಧ್ಯೆ ಪ್ರತ್ಯಕ್ಷನಾದುದು, ನಂತರ ಕರ್ತನ ಮತ್ತೊಂದು ಪ್ರಕಟಗೊಳ್ಳುವಿಕೆಗಾಗಿ ಅವರು ಒಂದು ವಾರವೇ ಕಾಯಬೇಕಾಯಿತು. ಒಂದು ವಾರದ ನಂತರ ಆತನು ಹನ್ನೊಂದು ಮಂದಿಗೆ ಕಾಣಿಸಿಕೊಂಡನು ಮತ್ತು ಈ ರೀತಿಯಲ್ಲಿ ಕರ್ತನು ತನ್ನ ಸಹೋದರರಿಗೆ ವಾರದ ಮೊದಲನೆಯ ದಿನದಂದೇ ಕಾಣಿಸಿಕೊಂಡನೆಂದು ನಾವು ತಿಳಿಯುತ್ತೇವೆ. ಹೀಗಾಗಿ ಕರ್ತನ ಅಥವಾ ಬೇರೆ ಯಾವ ಅಪೋಸ್ತಲರ ಯಾವುದೇ ಅಪ್ಪಣೆಯಾಗಲೀ, ಅದೇಶವಾಗಲೀ ಇಲ್ಲದೆಯೂ ಆದಿ ಸಭೆಯವರು ವಾರದ ಮೊದಲನೆಯ ದಿನದಂದು ಕೂಡಿಬರುವ ಸಂಪ್ರದಾಯವನ್ನು ಬೆಳೆಸಿಕೊಂಡದ್ದು ಆಶ್ಚರ್ಯವೇನಲ್ಲ. ಇದು ಕರ್ತನ ಪುನರುತ್ಥಾನದಿಂದ ಅವರುಗಳು ಪಡಕೊಂಡ ಸಂತೋಷ ಮಾತ್ರವಲ್ಲದೆ ಆ ದಿನದಲ್ಲಿ ಕರ್ತನು ತನ್ನ ವಿಷಯವಾಗಿ ಶಾಸ್ತ್ರಗ್ರಂಥಗಳಲ್ಲಿ ಮುಂಚಿತವಾಗಿಯೇ ಬರೆದಿರುವುದನ್ನು ಅವರ ಮುಂದೆ ತೆರೆದಿಡುವಾಗ ಅವರ ಹೃದಯಗಳು ಕುದಿಯಿತೆಂಬುದರ ಜ್ಞಾಪಕಾರ್ಥವಾಗಿತ್ತು.

ಇದಲ್ಲದೆ ಆ ದಿನದಲ್ಲಿ ಒಟ್ಟಾಗಿ ರೊಟ್ಟಿಮುರಿಯುವ ಆಚರಣೆಯನ್ನು ಆಚರಿಸುವ ಕ್ರಮವನ್ನು ಅವರು ಮುಂದುವರಿಸಿದರು. ಆದರೆ ಇದು ಪಸ್ಕದ ಅಥವಾ ಕರ್ತನ ರಾತ್ರಿ ಭೋಜನದ ಆಚರಣೆ ಆಗಿರದೆ ಅವರು ಎಮ್ಮಾಹುವಿನಲ್ಲಿ ಕರ್ತನು ರೊಟ್ಟಿ ಮುರಿದು ಅವರಿಗೆ ಹಂಚಿಕೊಟ್ಟಾಗ ಅವರು ಯಾವರೀತಿಯಲ್ಲಿ ಆಶೀರ್ವದಿಸಲ್ಪಟ್ಟರು ಎಂಬುದನ್ನು ನೆನಪಿಸುವುದಾಗಿತ್ತು. ಆಗ ಅವರ ಕಣ್ಣುಗಳು ತೆರೆಯಲ್ಪಟ್ಟು ಅವರು ಆತನನ್ನು ಗುರುತಿಸಿದರು. ಆತನು ಅವರ ಸಂಗಡ ಮೇಲಂತಸ್ತಿನ ಮನೆಯಲ್ಲಿ ಊಟಕ್ಕೆ ಕೂತುಕೊಂಡಾಗ ರೊಟ್ಟಿ ಮುರಿದು ದೇವರ ಸ್ತೋತ್ರಮಾಡಿ ಹಂಚಿಕೊಡುವಾಗ ಅವರು ಆಶೀರ್ವದಿಸಲ್ಪಟ್ಟರು (ಲೂಕ 24:30,35; 41–43). ನಾವು ಓದಿ ತಿಳಿಯುವಂತೆ ಈ ರೊಟ್ಟಿಮುರಿಯುವುದನ್ನು ಸಂತೋಷದಿಂದ ಮಾಡುವುದಾಗಿತ್ತೇ ಹೊರತು ಆತನ ಮರಣದ ಜ್ಞಾಪಕಾರ್ಥವಾಗಿ ಅಲ್ಲ, ಆತನ ಪುನರುತ್ಥಾನದ ನೆನಪಿಗಾಗಿ. ಅದು ಆತನ ಮುರಿದ ದೇಹವನ್ನಾಗಲೀ, ಸುರಿಸಿದ ರಕ್ತವನ್ನಾಗಲೀ ಬಿಂಬಿಸುವುದಿಲ್ಲ. ಆದರೆ, ಆತನು ಅವರಿಗೆ ಬಹಿರಂಗಪಡಿಸಿದ ಒಂದು ಚೈತನ್ಯದಾಯಕವಾದ ಸತ್ಯವನ್ನು, ಆ ಮೂಲಕ ಅವರ ಹೃದಯಗಳು ಮುಂದಣ ನಿರೀಕ್ಷಣೆಯಲ್ಲಿ ತೃಪ್ತರಾದುದನ್ನೂ ಬಿಂಬಿಸುವುದಾಗಿದೆ. ಇದು ಆತನು ಸತ್ತವರೊಳಗಿಂದ ಪುನರುತ್ಥಾನಗೊಂಡದ್ದರಲ್ಲಿ ಅವರಿಗೆ ನಿಶ್ಚಿತವಾಯಿತು. (ಈ ರೊಟ್ಟಿಮುರಿಯುವ ಸಂದರ್ಭಗಳಲ್ಲಿ "ಪಾತ್ರೆ'ಯ ಬಗ್ಗೆ ಎಲ್ಲೂ ಪ್ರಸ್ತಾಪಿಸಿಲ್ಲ). ವಾರದ ಮೊದಲನೆಯ ದಿನ ಕೂಡಿಬರುವುದು ಒಂದು ಸಂತೋಷದಾಯಕ ಸಂದರ್ಭ–ಕ್ರಿಸ್ತನು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬರುವುದರ ಮೂಲಕ ಉಂಟಾದ ನೂತನ ಕ್ರಮದಲ್ಲಿ ಸಂತೋಷಿಸುವುದಾಗಿತ್ತು.

ಕ್ರಮೇಣವಾಗಿ ಸಭೆಯು ಯೆಹೂದ್ಯ ಮತಸಂಬಂಧದಿಂದ ಬಿಡುಗಡೆ ಹೊಂದುತ್ತಾ ಬಂತು. ವಿಶಿಷ್ಟವಾಗಿ ಯೆರೂಸಲೇಮ್ ನಗರದ ನಾಶನ ಮತ್ತು ಯೆಹೂದ್ಯರ ವ್ಯವಸ್ಥೆಯ ಚದುರಿಸುವಿಕೆಯಾದ ಮೇಲೆ ಏಳನೆಯದಿನದ ಸಬ್ಬತ್ತಿನ ಪ್ರಭಾವವು ಕುಂದುತ್ತಾ ಬಂದು ಇದು ಹೆಚ್ಚು ಕಡಿಮೆ ವಾರದ ಮೊದಲನೆಯದಿನಕ್ಕೆ ಸೇರ್ಪಡೆಯಾಯಿತು. ಈ ದಿನವು ನಮ್ಮ ಕರ್ತನು ಮಹಿಮೆ, ಗೌರವ ಮತ್ತು ನಿರ್ಲಯತ್ವದಿಂದ ಪುನರುತ್ಥಾನಗೊಂಡಂದಿನಿಂದ ನೂತನ ಸೃಷ್ಟಿಯ ಆತ್ಮೀಕ ವಿಶ್ರಾಂತಿ ಮತ್ತು ಚೈತನ್ಯದಾಯಕ ದಿನವಾಯಿತು.

ಅನ್ಯಜನರ ಲೋಕದಲ್ಲಿ ಸಾಮಾನ್ಯವಾಗಿ ದೇವರು ಅವರಿಗೆ ಯಾವುದೇ ವಿಶೇಷ ಆಜ್ಞೆಗಳನ್ನು ನೀಡಿರುವುದಿಲ್ಲ. ಅವರಿಗೆ ಕೇವಲ ಅವರ ಸ್ವಭಾವದಲ್ಲಿ ಬರೆಯಲ್ಪಟ್ಟ ಮೂಲ ನಿಯಮದ ಉಳಿಕೆಗಳು ಮಾತ್ರವೇ ಅವೆ. ಅವುಗಳು ಅಸ್ಪಷ್ಟವಾಗಿದ್ದು, ಪಾಪ ಮತ್ತು ಮರಣದಿಂದ ಬಹುಮಟ್ಟಿಗೆ ನಿರ್ನಾಮಗೊಂಡಿದೆ. ಇವರಿಗೆ "ಪಶ್ಚಾತ್ತಾಪಪಡಿರಿ!" ಎಂಬ ಒಂದು ಆಜ್ಞೆ ಮಾತ್ರ ಕೊಡಲ್ಪಟ್ಟಿದೆ. ಯಾಕೆಂದರೆ, ಜೀವನದನೂತನ ಅವಕಾಶವೊಂದು ಒದಗಿಸಲ್ಪಟ್ಟಿದೆ (ಅದನ್ನು ಈಗ ಪಡೆಯಬಹುದು ಅಥವಾ ಧರ್ಮಯುಗದಲ್ಲಿ ಪಡಕೊಳ್ಳಬಹುದು). ಎಲ್ಲಾ ಇಚ್ಛಾಪೂರ್ವಕವಾದ ಕಾರ್ಯಗಳಿಗೂ ಮತ್ತು ಆಲೋಚನೆಗಳಿಗೂ ಅಂತಿಮ ಫಲದೊಂದಿಗೆ ಸಂಬಂಧವಿದೆ. ಆದರೆ ಕ್ರಿಸ್ತನಿಂದ ಹೊರಗಿರುವವರಿಗೆ ಪಶ್ಚಾತ್ತಾಪಪಡಿರಿ ಎಂಬುದಕ್ಕಿಂತ ಹೆಚ್ಚಿನ ಯಾವ ಆಜ್ಞೆಯನ್ನು ನೀಡಿರುವುದಿಲ್ಲ. ಪಶ್ಚಾತ್ತಾಪ ಪಟ್ಟವರೊಡನೆ ಮಾತ್ರವೇ ಕರ್ತನು ಇನ್ನು ಮಾತನಾಡುತ್ತಾನೆ. ಯಾಕೆಂದರೆ ಅವರಿಗೆ ಕೇಳುವ ಕಿವಿಗಳು, ವಿಧೇಯತೆ ತೋರುವ ಹೃದಯವೂ ಇರುತ್ತವೆ.

ನಮ್ಮ ಕಾಲದಲ್ಲಿರುವ ಮಿಲಿಯಾಂತರ ಹೆಸರಿಗೆ ಮಾತ್ರದ ಕ್ರೈಸ್ತರು ಕ್ರಿಸ್ತನ ಕೃಪೆಯ ನಿಜವಾದ ಗುಣಲಕ್ಷಣಗಳನ್ನು ಮತ್ತು ನೂತನ ಸೃಷ್ಟಿಗಿರುವ ಪ್ರಸ್ತುತ ಕರೆಯನ್ನು ಗ್ರಹಿಸಿಕೊಳ್ಳುವಲ್ಲಿ ವಿಫಲರಾಗಿರುವುದು ಮಾತ್ರವಲ್ಲದೆ ನೂತನ ಸೃಷ್ಟಿಯ ಕಾನೂನನ್ನು ಅರ್ಥಮಾಡಿಕೊಳ್ಳುವಲ್ಲಿಯೂ ಸಾಮಾನ್ಯವಾಗಿ ಸೋತುಹೋಗಿದ್ದಾರೆ ಮತ್ತು ಅವುಗಳ ಅನಿರ್ಬಂಧತೆ ಮತ್ತು ಸಂಕೇತ ಮುಂತಾದವುಗಳನ್ನು ತಪ್ಪಾಗಿ ಅರ್ಥೈಸುವವರಾಗಿದ್ದಾರೆ. ಸಭೆಯತ್ವವು ಬಲಗೊಂಡು ಈ ಲೋಕಕ್ಕೆ ದೀಕ್ಷಾಸ್ನಾನದ ಬಗ್ಗೆ, ಕರ್ತನ ಭೋಜನ ಮುಂತಾದವುಗಳ, ಸಬ್ಬತ್ತಿನ ಬಗ್ಗೆ, ದೇವರ ಆಜ್ಞೆ ಮತ್ತು ನೂತನ ಸೃಷ್ಟಿಯೊಡನೆ ಮಾಡಿಕೊಂಡಿರುವ ಒಡಂಬಡಿಕೆಯ ಬಗ್ಗೆ ತಪ್ಪು ವಿಚಾರಗಳನ್ನು ಬೋಧಿಸತೊಡಗಿವೆ. ಈ ಕಾಲದಲ್ಲಿ ಹೆಸರು ಮಾತ್ರದ ಕ್ರೈಸ್ತ ಸಾಮ್ರಾಜ್ಯದವರು ಮೇಲ್ಕಂಡ ವಿಷಯಗಳ ಸತ್ಯತೆಯನ್ನು ಅರ್ಥಮಾಡಿಕೊಳ್ಳಬೇಕೆಂಬುದು ಸ್ಪಷ್ಟವಾಗಿ ಕರ್ತನ ಉದ್ದೇಶವಲ್ಲ. ಅಪೋಸ್ತಲನು ಹೇಳಿರುವಂತೆ "ದೇವರು ತನ್ನನ್ನು ಪ್ರೀತಿಸುವವರಿಗಾಗಿ (ತನ್ನ ಚಿಕ್ಕ ಹಿಂಡಿಗಾಗಿ) ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ. ಅದರ ಭಾವನೆಗಳು ಮನುಷ್ಯರ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು (ಈ ಸಂಗತಿಗಳನ್ನು) ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು (ನಮ್ಮ ಬಗ್ಗೆ ಪ್ರಸ್ತುತದಲ್ಲಿಯೂ ಮತ್ತು ಭವಿಷ್ಯದಲ್ಲಿಯೂ ಆತನಿಗಿರುವ ಒಳ್ಳೆಯ ಮತ್ತು ಅಂಗೀಕಾರಾರ್ಹವೂ ಸಮರ್ಪಕವೂ ಆದ ಚಿತ್ತವನ್ನು) ಕೂಡಾ ಪರಿಶೋಧಿಸುವವನಾಗಿದ್ದಾನೆ" (1ಕೊರಿ.2:9–10). ಮಹಾ ಕರೆಯ ಚೈತನ್ಯವನ್ನು, ಅಥವಾ ಆಯ್ದುಕೊಂಡವರಿಗಿರುವ ಮುಕ್ತ ಸ್ವಾತಂತ್ರದ ನಿಯಮವನ್ನು ಮೆಚ್ಚುವುದಲ್ಲ – ದೇವರಾತ್ಮನ ಕೊರತೆಯಿಂದಾಗಿ ಇವುಗಳನ್ನು ಮೆಚ್ಚಿಕೊಳ್ಳಲು ಶಕ್ತರಾಗುವುದಿಲ್ಲ ಮತ್ತು ಹೆಸರಿನ ಮಾತ್ರವಾದ ಕ್ರೈಸ್ತ ಸಾಮ್ರಾಜ್ಯದವರಿಗೆ ಉತ್ಸವಗಳು, ಉಪವಾಸದ ದಿನಗಳು, ಪಾಪನಿವೇದನೆಗಳು, ಒಂದಲ್ಲಾ ಒಂದು ವಿಧವಾದ ನಿರ್ಬಂಧನೆಗಳು ಪವಿತ್ರ ದಿನಗಳು, ಸಬ್ಬತ್ತುದಿನ ಮುಂತಾದವುಗಳು ಅನ್ಯರಿಗೆ ಕೈಕೋಳಗಳೂ ಮತ್ತು ಸರಪಳಿಗಳೂ ಆದಲ್ಲಿ ನಾವು ಆಶ್ಚರ್ಯ ಪಡಬೇಕಾದ್ದಿಲ್ಲ. ಕರ್ತನ ನಿಜವಾದ ಜನರಾದ, ಆಯಲ್ಪಟ್ಟ ಚಿಕ್ಕ ಹಿಂಡು ಎನಿಸಿಕೊಂಡ ಕೆಲವರು ನಂತರದ ದಿನಗಳಲ್ಲಿ ಇಂತಹ ಬಂಧನಗಳಿಗೆ ಕಟ್ಟುಬಿದ್ದು ದೇವರ ಮಕ್ಕಳಿಗೆ ದೊರೆಯುವ ನಿಜವಾದ ಸ್ವಾತಂತ್ರ್ಯವನ್ನು ಕಳಕೊಂಡರೂ ಸಹಾ ನಾವು ಆಶ್ಚರ್ಯಪಡಬೇಕಾಗಿಲ್ಲ.

ನಾವು ವಾರದ ಮೊದಲನೆಯ ದಿನ ಆಚರಣೆಯ ಬಗ್ಗೆ ವಾದಮಾಡುತ್ತಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ದೇವರ ಕೃಪೆಯಿಂದ ಈ ದಿನವನ್ನು ನಾಗರೀಕ ಪ್ರಪಂಚವು ಸರ್ವಸಾಮಾನ್ಯವಾಗಿ ಆಚರಿಸುತ್ತಿರುವುದಕ್ಕಾಗಿ ನಾವು ಹರ್ಷಿಸುತ್ತೇವೆ. ಈ ದಿನವನ್ನು ಸರ್ವಸಾಮಾನ್ಯವಾಗಿ ಆಚರಿಸುತ್ತಿರುವ ಕಾರಣ ದೇವರಿಂದ ಅಭಿಷಕ್ತರಾದ ಕೆಲವರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಬಹುಶಃ ಇದು ಸರ್ವ ಸಾಮಾನ್ಯವಾಗದೇ ಹೋಗಿದ್ದರೆ ಇಂಥಾ ಸೌಕರ್ಯವು ತಪ್ಪಿಹೋಗುತ್ತಿತ್ತು. ಈಗ ನೂತನ ಸೃಷ್ಟಿಗಳು ವಾರದ ಒಂದು ದಿನವನ್ನು ಆರಾಧನಾ ದಿನವನ್ನಾಗಿ, ಆತ್ಮೀಕ ಅನ್ಯೋನ್ಯತಾ ದಿನ ಎಂಬದಾಗಿ ಆಚರಿಸಬಹುದೆಂದು ಖಂಡಿತವಾಗಿಯೂ ಸಂತೋಷಪಡಬಹುದು. ಈ ದಿನವನ್ನು ಸಾಮಾನ್ಯ ಉಪಯೋಗದಿಂದ ತೆಗೆದುಹಾಕಿದಲ್ಲಿ ಗಂಭೀರವಾದ ನಷ್ಟವುಂಟಾದೀತು. ಈ ಕಾರಣದಿಂದ ಈ ದಿನವನ್ನು ಪೂಜ್ಯಭಾವದಿಂದಲೂ, ಶಾಂತಚಿತ್ತದಿಂದಲೂ, ಆತ್ಮೀಕ ಕಾರ್ಯಗಳನ್ನು ನೆರವೇರಿಸುವುದರ ಮೂಲಕ ಈ ದಿನದ ಆಚರಣೆಯ ಮೇಲೆ ಪ್ರಭಾವಬೀರುವುದು ಬಹಳ ಅಗತ್ಯವಾಗಿದೆ. ಉದಾಸೀನಮಾಡಿದಲ್ಲಿ ಇದರ ಆಚರಣೆಯು ಜನರಲ್ಲಿ ಸಾಮಾನ್ಯವಾಗಿ ಕುಗ್ಗಿಹೋಗಬಹುದಾಗಿದೆ.

ಆದರೆ ಕೆಲವರಿಗೆ ಯೆಹೂದ್ಯ ಒಡಂಬಡಿಕೆಯಲ್ಲಿನ ಏಳನೆಯ ದಿನವು ಎಲ್ಲಾ ಜನರಿಗೆ ಒಂದು ಬಂಧನದ ರೂಪದಲ್ಲಿ ವಿಸ್ತರಿಸಲ್ಪಟ್ಟಿದೆ ಎಂಬ ತಪ್ಪು ಬೋಧನೆಯನ್ನು ಮಾಡಲಾಗಿದ್ದು ಇತರರೂ ಮೊದಲನೆಯ ದಿನದಲ್ಲಿ ಅದೇ ದಾಸತ್ವಕ್ಕೆ ಒಳಗಾಗುವರೆಂದು ಆಲೋಚಿಸುವಂತಾಗಿದೆ. ಅವರು ಆ ದೇವರ ನೇಮಕದ ಪ್ರಕಾರ ಯೆಹೂದ್ಯರ ಏಳನೆಯ ದಿನದ ಹೊರಗಣ ಪುಣ್ಯಶೀಲತೆಯಿಂದ ಯೆಹೂದ್ಯ ನಿಬಂಧನೆಗನುಸಾರವಾಗಿ ದಾಸತ್ವದ ಮನೆಯವರಂತೆ ಧರ್ಮಶಾಸ್ತ್ರದ ಅಡಿಯಲ್ಲಿ ಹೊದಿಸಲ್ಪಟ್ಟಿದ್ದೇವೆ, ಕೃಪೆಯಿಂದಲ್ಲ ಎಂಬ ತಪ್ಪು ತಿಳುವಳಿಕೆಯಲ್ಲಿಯೇ ಕಷ್ಟ ಪಡುವವರಾಗಿದ್ದಾರೆ. ನಿಜವಾಗಿಯೂ, ಇನ್ನೂ ಸಾಕಷ್ಟು ಧಾರ್ಮಿಕರಲ್ಲದವರು ಯಾವುದೇ ಪ್ರತಿಷ್ಠೆಯನ್ನು ಪ್ರಚುರ ಪಡಿಸದವರು ಸಹಾ ಅಂತಹ ಆಚರಣೆಗಳಿಂದ ತುಂಬಿದವರಾಗಿದ್ದು, ವಾರದ ಮೊದಲನೆಯ ದಿನವನ್ನು ಆರಾಧನೆ ಮತ್ತು ಸ್ತೋತ್ರಕ್ಕಾಗಿ ಅದನ್ನು ತಕ್ಕಮಟ್ಟಿಗಾದರೂ ಉಪಯೋಗಿಸಲು ಯಾವುದೇ ಮಟ್ಟದಲ್ಲಿ ಉದಾಸೀನಮಾಡಿ ಅದಕ್ಕೆ ಬದಲಾಗಿ ಪ್ರಾಪಂಚಿಕ ವಹಿವಾಟುಗಳಿಗೆ ಉಪಯೋಗಿಸುವವರಾಗಿದ್ದು ದೇವರ ಮಕ್ಕಳಿಗೆ ಸಲ್ಲತಕ್ಕ ಗೌರವವನ್ನು ಕಳಕೊಳ್ಳುವವರಾಗಿದ್ದಾರೆ. ಈ ಎಲ್ಲಾ ಕಾರಣಗಳಿಂದ ಕ್ರಿಸ್ತನು ನೀಡುವ ಸ್ವಾತಂತ್ರ್ಯವನ್ನು ಸ್ಪಷ್ಟವಾಗಿ ಗ್ರಹಿಸುವವರು ತಮ್ಮ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಂಡು ಇತರರಿಗೆ ಅಡ್ಡಿಯಾಗದಿರುವಂತೆ ಬದಲಾಗಿ ಅವರು ಅದನ್ನು ದೇವರಿಗಾಗಿ ಮತ್ತು ಇತರರಿಗೆ ಕೃಪೆಗಾಗಿ, ಜ್ಞಾನಕ್ಕಾಗಿ ಮತ್ತು ದೇವರಾತ್ಮನಿಂದ ದೊರೆಯುವ ಎಲ್ಲಾ

ಫಲಗಳನ್ನು ಪಡಕೊಳ್ಳುವ ಸಲುವಾಗಿ ಮತ್ತು ಅವುಗಳಲ್ಲಿ ಬೆಳೆಯುವ ಅವಕಾಶಗಳಿಗಾಗಿ ಉಪಯೋಗಿಸುವಂತೆ ನಾವು ಬುದ್ಧಿವಾತುಗಳನ್ನು ಹೇಳುವವರಾಗಿದ್ದೇವೆ. ಎಲ್ಲಾ ವಿವೇಚನಾಯುಕ್ತ ಬಂಧನದಲ್ಲಿ ದೇವರ ಪ್ರತಿಷ್ಠಿತ ಜನರು ತಮ್ಮ ಪ್ರಭಾವವು ವಿಸ್ತರಿಸಿದಂತೆಲ್ಲಾ ಅವರ ಕುಟುಂಬಗಳು ಅಪ್ರಾಪ್ತ ವಯಸ್ಸಿನ ಮಕ್ಕಳು ಮಾತ್ರವಲ್ಲ ಪ್ರಾಯಸ್ತರು ಸಹಾ ಭಾನುವಾರವನ್ನು ಪ್ರಾಮಾಣಿಕವಾಗಿ ಆಚರಿಸಬೇಕೆಂದು ನಾವು ತಿಳಿಹೇಳುತ್ತೇವೆ. ಅಂತಹ ದೇವಾರಾಧನಾ ಮತ್ತು ಸ್ತೋತ್ರವರ್ಪಿಸುವ ದಿನವನ್ನು ಉಚಿತವಾದ ರೀತಿಯಲ್ಲಿ ಗೌರವಿಸಬೇಕು, ಮತ್ತು ದೈಹಿಕ ಶ್ರಮದಿಂದ ವಿಶ್ರಾಂತಿ ಪಡೆಯ ಬೇಕೆಂದು ನಾವು ಸಭೆಗೆ ಮಾತ್ರವಲ್ಲ ಇಡೀ ಲೋಕದವರಿಗೆ ಸೂಚಿಸಬೇಕಾಗಿದೆ.

ಯೆಹೂದ್ಯ ಧರ್ಮಶಾಸ್ತ್ರದಿಂದ ಸಂಪೂರ್ಣವಾಗಿ ಮುಕ್ತರಾಗಿರುವಾಗ ನಾವು ಹೇಗೂ ಅದರ ಹಂಚಿಕೆಗಳು ದೇವರಿಂದ ಬಂದವುಗಳಾಗಿರುವುದರಿಂದ ಇಸ್ರಾಯೇಲ್ಯರ ಶಾಸನಗಳ ನಮೂನೆಯ ಸೂಚನೆಗಳಿಗೆ ಸೇರಿದಂತೆ ಅದರೊಂದಿಗೆ ಕಾರ್ಯರೂಪಕವಾದ ಶುಭವು ಇರಬಹುದಾದ ಎಲ್ಲಾ ಸಾಧ್ಯತೆಗಳಿವೆಯೆಂದು ನಾವು ಗ್ರಹಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗಾಗಿ, ಕೆಲವೊಂದು ಪ್ರಾಣಿಗಳು ಆಹಾರಕ್ಕೆ ತಕ್ಕವೂ ಶುದ್ಧವೂ ಆಗಿವೆ, ಬೇರೆ ಕೆಲವು ಅಶುದ್ಧವೂ ಸೇವನೆಗೆ ಯೋಗ್ಯವಲ್ಲವುಗಳೂ ಆಗಿವೆ. ಈ ರೀತಿಯಲ್ಲಿ ಕೆಲವೊಂದು ಆಹಾರವು ಅನಾರೋಗ್ಯಕರ ಹೇಗೆಂದು ನಮಗೆ ಅರ್ಥವಾಗುವುದಿಲ್ಲ. ಹಂದಿ, ಮೊಲ, ನೀರುಹಾವುಗಳು ಈ ಜಾತಿಗೆ ಸೇರಿದ್ದವೆಂದು ನಂಬಲು ನಮಗೆ ಎಲ್ಲಾ ಕಾರಣಗಳಿವೆ. ಇವುಗಳನ್ನು ತಿನ್ನುವುದರಿಂದ ನಾವು ಯಾವುದೇ ನಿಯಮವನ್ನು ಉಲ್ಲಂಘಿಸುವುದಿಲ್ಲ, ಯಾಕೆಂದರೆ ನಾವುಗಳು ಯೆಹೂದ್ಯರಲ್ಲ. ಹೀಗಿದ್ದಾಗ್ಯೂ ನಾವು ಅವುಗಳ ಬಗ್ಗೆ ನಿಜವಾಗಿ ಅನುಮಾನಿಸಬಹುದು ಮತ್ತು ಎಷ್ಟರ ಮಟ್ಟಿಗೆ ಅವುಗಳು ಅನಾರೋಗ್ಯಕರ ಇಲ್ಲವೆ ಆರೋಗ್ಯಕರ ಎಂಬುದರ ಬಗ್ಗೆ ಎಚ್ಚರಿಕೆ ವಹಿಸಬಹುದು. ಯಾಕೆಂದರೆ ನಾವು ಅರೋಗ್ಯಪಾಲನೆಯ ಎಲ್ಲಾ ನಿಯಮಗಳನ್ನೂ ಅವುಗಳನ್ನು ಗ್ರಹಿಸುವ ಮಟ್ಟಿಗೆ ಪಾಲಿಸಲು ಬದ್ಧರಾಗಿದ್ದೇವೆ.

ಇದೇ ರೀತಿಯಲ್ಲಿ ನಾವು ಏಳುದಿನಗಳ ಒಂದು ದಿನದಲ್ಲಿ ಇಸ್ರಾಯೇಲ್ಯರಿಗೆ ಒದಗಿಸಿದ ಸಾಂಕೇತಿಕವಾದ ಬೋಧನೆಗಳಲ್ಲದೆ ಇಂದಿನ ಮಾನವ ಜಾತಿಯ ಸ್ಥಿತಿಗೆ ಅವಶ್ಯಕವಾದ ಅವಕಾಶಗಳನ್ನೂ ನೋಡಬಹುದು. ದೇವರ ವಾಕ್ಯಗಳನ್ನು ಸಮಗ್ರವಾಗಿ ನಿರ್ಲಕ್ಷಿಸುವವರು ಸಹಾ ಪ್ರತಿ ಏಳನೆಯ ದಿನ ವಿಶ್ರಾಂತಿ ಪಡೆಯುವುದು ಮಾನವಜಾತಿಗೆ ಮಾತ್ರವಲ್ಲ ಭಾರಹೊರುವ ಪಶುಗಳಿಗೂ ಅನುಕೂಲಕರವೆಂದು ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತಾರೆ. ಇದರೊಂದಿಗೆ, ನಿರಂತರವಾದ ಕೆಲಸದಿಂದ ವಿಶ್ರಾಂತಿ ಅಗತ್ಯತೆಯ ಈ ನಿಯಮವು ಜಡವಸ್ತುಗಳಿಗೂ ಅನ್ವಯವಾಗುತ್ತದೆಂದು ಕೆಲವರು ಹೇಳುತ್ತಾರೆ. ಉದಾಹರಣೆಗೆ ರೈಲ್ವೆಯವರ ಉರಳುವ ಸರಕುಗಳು ಮುಂತಾದವುಗಳು. ಈ ಅಂಶಕ್ಕೆ ದೃಷ್ಟಾಂತವಾಗಿ London Express ಪತ್ರಿಕೆಯಲ್ಲಿ ಬಂದ ಲೇಖನವೊಂದನ್ನು ನಾವು ಇಲ್ಲಿ ಉಲ್ಲೇಖಿಸುತ್ತೇವೆ:

"ಜನರು ಬಳಲಿದ ಬಂಡಿಯ ಅಥವಾ ಆಯಾಸಗೊಂಡ ಕಬ್ಬಿಣದ ಹಳಿಯ ಬಗ್ಗೆ ಮಾತನಾಡುವುದನ್ನು ಕೇಳಿಸಿಕೊಳ್ಳಲು ವಿಚಿತ್ರವೆನಿಸುತ್ತದೆ. ಆದರೆ ಇಂತಹ ಸಂಭಾಷಣೆಗಳು ರೈಲ್ವೆಯಲ್ಲಿಯೂ ಮತ್ತು ಮೆಶಿನ್ ಶಾಪ್‌ಗಳಲ್ಲಿ ಕೇಳಿಬರುತ್ತವೆ ಮತ್ತು ಇವುಗಳು ಯುಕ್ತವಾದವುಗಳೆಂದು ಪರಿಗಣಿಸಬಹುದು. "ಜಡವಸ್ತುಗಳು ಬಳಲುವ ಕಲ್ಪನೆ!" ಎಂಬುದು ನಿಮ್ಮ ಆಲೋಚನೆಯಾಗಿದ್ದಿರಬಹುದು. ಆದರೆ ಯಂತ್ರಗಳ ಸಂಬಂಧಿತ ಪರಿಣಿತರು ಹೇಳುವುದೇನಂದರೆ ಅದರ ಕೆಲಸವು ಅವನ್ನು ಬಳಲುವಂತೆ ಮಾಡುತ್ತದೆ, ನಿಮಗೆ ಬೇಕಿರುವಂತೆ ಅವುಗಳಿಗೂ ವಿಶ್ರಾಂತಿಯ ಅಗತ್ಯವಿದೆ ಎಂದು ಹೇಳುತ್ತಾರೆ. "ಚಕ್ರವು ತುಂಡಾಗಲು ಕಾರಣವೇನು?" ಎಂಬ ಪ್ರಶ್ನೆಗೆ ಅದರ ಪರಿಶೀಲಕನು ಲೋಹದ ನಿರಂತರವಾದ ಪ್ರಯಾಸ" ಎಂದು ಉತ್ತರಿಸುತ್ತಾನೆ. ಇಂತಹ ಉತ್ತರಗಳು ಆಗಾಗ್ಗೆ ದೊರೆಯುತ್ತವೆ ಮತ್ತು ಇವುಗಳು ಸತ್ಯವೂ ಆಗಿದೆ. ಕೆಲವೊಮ್ಮೆ ವಾಡಿಕೆಯಾದ ಬಳಲಿಕೆಗೂ ಕಡಿಮೆ ಮಟ್ಟದಲ್ಲಿ ಚಕ್ರಗಳು ತುಂಡಾಗುತ್ತವೆ ಅಥವಾ ಹಳಿಯು ಅಗಲವಾಗುತ್ತವೆ. ಸಾಧ್ಯವಾದ ಸೂಕ್ಷ್ಮವಾದ ಪರಿಶೀಲನೆಯು ಯಾವುದೇ ಕೊರತೆ ಅಥವಾ ದುರ್ಬಲತೆ ಇತ್ತೆಂದು ತೋರಿಸುವುದಿಲ್ಲ. ಲೋಹದ ದಣಿವೇ ಇದಕ್ಕೆ ಕಾರಣವೆಂದು ಇಂಜಿನಿಯರುಗಳು ಹೇಳುವಂತೆ ಇದು ನಡೆಸುತ್ತದೆ. ಉಕ್ಕಿನ ಸ್ನಾಯುಗಳು ಬಳಲಬಹುದು. ಅದರಂತೆ ಮಾಂಸಖಂಡಗಳು ಸಹಾ ಮತ್ತು ವಿಶ್ರಾಂತಿ ಇಲ್ಲದ ಲೋಹವು ತನ್ನ ಕಾರ್ಯವನ್ನು ಸ್ಥಗಿತಗೊಳಿಸಬಹುದು ಮತ್ತು ಹೆಚ್ಚಿನ ಗಂಡಾಂತರವನ್ನುಂಟು ಮಾಡಬಹುದು. ವಿಶ್ರಾಂತಿ ಇಲ್ಲದ ಕಾರಣ ಲೋಹದಲ್ಲಿನ ಕಣಗಳ ಸಾಮ್ಯವು ಮುರಿಯುವ ಮಟ್ಟಿಗೆ ಪರಸ್ಪರ ಬಲಹೀನಗೊಳ್ಳುತ್ತವೆ. ಆಗ ತೊಂದರೆ ಉಂಟಾಗುತ್ತದೆ ಎಂದು ಕನಿಷ್ಟ ಪಕ್ಷ ಇಂಜಿನಿಯರುಗಳು ದೃಢಪಡಿಸುತ್ತಾರೆ."

ಫ್ರಾನ್ಸ್ ದೇಶದಲ್ಲಿ ಚಿಕ್ಕ ಸ್ವತಂತ್ರದ ನಿರ್ನಾಮದ ಬಳಿಕ ಮತ್ತು ಆ ಬಗ್ಗೆ ನಿಷ್ಟೆ ಇಲ್ಲದಿರುವ ಕಾಲದಲ್ಲಿ ಸತ್ಯವೇದದ ಏಳರಲ್ಲಿ ಒಂದು ದಿನವಾದ ಸಬ್ಬತ್ ಕಾಲವನ್ನು ಅಳಿಸಿಹಾಕಲು ಮತ್ತು ಇದಕ್ಕೆ ಬದಲಾಗಿ ಹತ್ತರಲ್ಲಿ ಒಂದು ದಿನವನ್ನು ವಿಶ್ರಾಂತಿ ದಿನವನ್ನಾಗಿ ಮಾಡಲು ನಿರ್ಧರಿಸಲಾಯಿತು. ಆದರೆ ಇದು ಅತೃಪ್ತಿಯಾಗಿ ಕೆಲಸಮಾಡುವುದು ಕಂಡು ಬಂತು. ಫ್ರೆಂಚರು ಮೆಟ್ರಿಕ್ ಪದ್ದತಿಯನ್ನು ಪರಿಗಣಿಸಲು ಎಷ್ಟೇ ಬಯಸಿದರಾದರೂ ಅವರು ಪ್ರಕೃತಿಯಲ್ಲಿನ ಪದ್ದತಿಯೊಂದನ್ನು ಕೂಡಲೇ ಕಂಡುಕೊಂಡರು. ಪ್ರಕೃತಿಯು ತನ್ನದೇ ಆದ ಪದ್ದತಿಯನ್ನು ಹೊಂದಿದ್ದು ಸಂಖ್ಯೆ ಏಳರ ಮೇಲೆ ನಿರುತ್ತರಧಾರಿಯಾಗಿ ಒಪ್ಪಿಗೆಯ ಗುರುತು ಮಾಡುವುದಾಗಿದೆ. ಉದಾಹರಣೆಯಾಗಿ, ಒಂದು ಕಾಯಿಲೆಯು ಏಳನೇ ದಿನ ಅಥವಾ 14ನೇ ದಿನ ಅಥವಾ 21ನೇ ದಿನ ಅಥವಾ 28ನೇ ದಿನ ತನ್ನ ಉತ್ಕಟ ಸ್ಥಿತಿಗೆ ತಲಪುತ್ತದೆ. 35ನೇ ದಿನದೊಳಗಾಗಿ ಯಾವುದೇ ಅನುಕೂಲಕರ ಬದಲಾವಣೆ ಕಂಡು ಬಾರದೇ ಹೋದಲ್ಲಿ ಸಾಮಾನ್ಯವಾಗಿ ಆ ವ್ಯಕ್ತಿಯು ಮರಣಿಸುತ್ತಾನೆ. ಇದನ್ನು ಅವರು ಬದಲಾಯಿಸಿ ಇಲ್ಲಿ ದಶಮಾಂಶ ಪದ್ಧತಿಯಂತೆ ಜ್ವರವು ಉಲ್ಬಣಗೊಳ್ಳುವಂತೆ ಮಾಡಲು ಸಾಧ್ಯವಿಲ್ಲ.

ಹಾಗಾದರೆ ಇಲ್ಲಿಯವರೆಗೆ ಕ್ರೈಸ್ತ ಭಾನುವಾರವನ್ನು ತೊರೆಯುವ ಪ್ರತಿಪಾದನೆ ಮಾಡುವುದಕ್ಕಿಂತ ಅದನ್ನು ಪ್ರಾಕೃತಿಕ ಮನುಷ್ಯನ ಅನುಕೂಲತೆಗೂ, ನೂತನ ಸೃಷ್ಟಿಯ ಆಧ್ಯಾತ್ಮಿಕ

ಅನುಕೂಲತೆಗೂ ಉಳಿಸುವಂತೆ ನಾವು ಒತ್ತಾಯಿಸುತ್ತೇವೆ. ಯಾವುದೇ ಅರ್ಥದಲ್ಲಿ ಅಥವಾ ಯಾವುದೇ ಪ್ರಮಾಣದಲ್ಲಿ ಯೆಹೂದ್ಯ ಧರ್ಮಶಾಸ್ತ್ರದ ಮುಖಾಂತರ ನಮಗೆ ಪ್ರಾಪ್ತವಾದ ಈ ಮಹಾ ಆಶೀರ್ವಾದವನ್ನು ಬದಿಗಿರಿಸಬಾರದೆಂದು ನಾವು ಒತ್ತಾಯಿಸುತ್ತೇವೆ. ನಿಜವಾಗಿಯೂ, ಪ್ರತಿಯೊಬ್ಬರೂ ಒಂದು ದಿನವನ್ನು ಸ್ವಯಿಚ್ಛೆಯಿಂದ ಕರ್ತನಿಗಾಗಿ ಮೀಸಲಿಡುವುದರಲ್ಲಿ ನಾವು ಹರ್ಷಿಸುತ್ತೇವೆ. ಆದರೆ ಹೆಚ್ಚಿನವರು ಇದನ್ನು ಗ್ರಹಿಸದ ಕಾರಣ ಅವರು ಈ ವಿಷಯದಲ್ಲಿ ಹಾನಿಕಾರಕವಲ್ಲದ ಭ್ರಾಂತಿಯಲ್ಲಿ ಸುಮ್ಮನಿರಲು ಬಿಡುವುದಿಲ್ಲ–ಇಂತಹ ಭ್ರಾಂತಿಯು ಅವರ ಪಾಲಿಗೆ ನಿಜವಾಗಿಯೂ ಅನುಕೂಲಕರ.

ತಮ್ಮ ಜೀವಿತವು ಸಂಪೂರ್ಣವಾಗಿ ಪ್ರತಿಷ್ಠೆಗೊಂಡಿದ್ದು ಅದು ದೇವರ ಸೇವೆಗೆ ಮೀಸಲಾಗಿದೆ ಎಂಬುದನ್ನು ಗ್ರಹಿಸಿಕೊಂಡಿರುವ ನೂತನ ಸೃಷ್ಟಿಗೆ ಆ ದಿನದ ಯೋಗ್ಯ ಉಪಯೋಗಿಸುವಿಕೆಯ ಬಗ್ಗೆ ಯಾವುದೇ ವಿಶೇಷ ಬುದ್ಧಿಮಾತುಗಳ ಅವಶ್ಯಕತೆ ಇರುವುದಿಲ್ಲ. ಅವರು ತಮ್ಮ ದೈಹಿಕ ಇಚ್ಛೆಯಂತೆ ನಡೆದುಕೊಳ್ಳದೆ ಆತ್ಮೀಕ ರೀತಿಯಲ್ಲಿ ನಡಕೊಳ್ಳುವವರಾಗಿದ್ದು ಅವರು ಸದಾ ದೇವರನ್ನು ಆತನದೇ ಆದ ತಮ್ಮ ದೇಹಗಳ ಮತ್ತು ಆತ್ಮಗಳ ಮುಖಾಂತರ ಮಹಿಮೆಪಡಿಸುವಂತಹ ಅನುಕೂಲಕರ ವಿಶೇಷ ಸಂಧರ್ಭಗಳಿಗಾಗಿ ಕಾತುರರಾಗಿರುತ್ತಾರೆ. ಸ್ತೋತ್ರ, ಕೃತಜ್ಞತಾರ್ಪಣೆ, ಧ್ಯಾನ ಮತ್ತು ದೇವರ ಯೋಜನೆ ಮತ್ತು ವಾಕ್ಯಾನುಸಾರವಾದ ಬೋಧನೆಗಳು ಇವೆಲ್ಲವೂ ಕ್ರಮಬದ್ಧವಾಗಿರುತ್ತವೆ. ನಾವು ಕರ್ತನ ದಿನ ಅಥವಾ ಭಾನುವಾರವನ್ನು ಧಾರ್ಮಿಕ ಆರಾಧನೆಗಾಗಿ ಉಪಯೋಗಿಸಲೇಬೇಕೆಂದು ಒತ್ತಾಯಿಸುವುದಿಲ್ಲ. ದೇವರು ಆ ರೀತಿಯ ಆಜ್ಞೆಯನ್ನಿತ್ತಿಲ್ಲ ಅಥವಾ ಬೇರೆ ಯಾರಿಗೂ ಹಾಗೆ ಹೇಳುವ ಹಕ್ಕಿಲ್ಲ. ಹೀಗಿದ್ದಾಗ್ಯೂ, ನಮ್ಮ ಹೃದಯ, ನಮ್ಮ ಸಹಾನುಭೂತಿ ಮತ್ತು ಪ್ರೀತಿ ಅದರಲ್ಲಿರುವಾಗ ಅಲ್ಲಿ ನಾವು ಆನಂದಿಸುತ್ತೇವೆ. ನೂತನ ಸೃಷ್ಟಿಯ ಪ್ರತಿಯೊಬ್ಬ ಸದಸ್ಯನೂ ತನ್ನ ಅತಿಮುಖ್ಯವಾದ ಸಂತೋಷ ಮತ್ತು ಆನಂದವನ್ನು ಕರ್ತನ ಮತ್ತು ಸಹೋದರರ ಸಾಂಗತ್ಯ ಮತ್ತು ಅನ್ಯೋನ್ಯತೆಯಲ್ಲಿ ಕಂಡುಕೊಳ್ಳುತ್ತಾನೆಂದು ನಾವು ಯಾವ ತೊಂದರೆಯೂ ಇಲ್ಲದೆ ತೀರ್ಮಾನಿಸಬಹುದು. ಇದರ ಪರಿಣಾಮವಾಗಿ ದೇವರ ವಾಕ್ಯವು ಅಜ್ಞಾಪಿಸದೆ ಎಚ್ಚರಿಸುವಂತೆ ಆತನು ಅವರೊಂದಿಗೆ ಕೂಡಿಕೊಳ್ಳುವುದನ್ನು ಬಹಳ ಅಪರೂಪವಾಗಿ ಮರೆಯುತ್ತಾನೆ – "ಸಭೆಯಾಗಿ ಕೂಡಿಕೊಳ್ಳುವುದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವುದರಿಂದ ಇದನ್ನು ಮತ್ತಷ್ಟು ಮಾಡಿರಿ" (ಇಬ್ರಿಯ 10:25)

ಯಾವ ಅಪ್ಪಣೆಯೂ ಇಲ್ಲದೆ ನಾವು ದೇವರಿಗೆ ಸ್ವಯಿಚ್ಛೆಯಿಂದ ಏನೇನನ್ನು ಮಾಡುತ್ತೇವೆಯೋ ಅವು ನಾವು ಆತನಿಗೆ ಮತ್ತು ಆತನವುಗಳಿಗೆ ತೋರಿಸುವ ಪ್ರೀತಿ ಮತ್ತು ನಿಷ್ಠೆಯಾಗಿದೆ. ನಿಸ್ಸಂದೇಹವಾಗಿ ಆತನು ಅವುಗಳನ್ನು ಮೆಚ್ಚಿಕೊಳ್ಳುವನು. ನೂತನ ಸೃಷ್ಟಿಯ ಹಲವು ಸದಸ್ಯರ ಪಾಲನೆಯಲ್ಲಿ ಮಕ್ಕಳುಗಳಿದ್ದಾರೆ. ಇವರಿಗೆ ಆ ದಿನದ ಅನುರೂಪತೆಗಳ ಬಗ್ಗೆ ಹಾಗೂ ಅವುಗಳ ಅನುಕೂಲತೆಗಳ, ಮತ್ತು ಸಂತೋಷ ಪಡುವುದರ ಬಗ್ಗೆ ಹಾಗೂ ನಾವು ಅನುಭವಿಸಬಹುದಾದ ಔಚಿತ್ಯಪೂರ್ಣ ಸ್ವಾತಂತ್ರ್ಯಗಳ ಬಗ್ಗೆ ಸರಿಯಾದ ಸೂಚನೆಗಳನ್ನು ನೀಡಬೇಕು. ದೇವರ ವಾಕ್ಯದಲ್ಲಿ ಯಾವುದೂ ಬಲತ್ಕಾರವಾದ ದಾಸತ್ವಕ್ಕೆ ಸಮರ್ಥಿಸುವುದಿಲ್ಲ. ಆದರೆ ಇಂದು ಇದು "ಮಹಾ ನೇಮಿಷ್ಠವಾದ ಸಬ್ಬತ್"ಎಂಬ ಹೆಸರಿನಲ್ಲಿ ಕ್ರೈಸ್ತರ ಮನೆಗಳನ್ನು ಸೇರಿಕೊಂಡಿದೆ. ಇದರ ನಿಯಮದ ಪ್ರಕಾರ ಆ ದಿನದಲ್ಲಿ ಒಂದು ಮುಗುಳ್ನಗೆ ಅಥವಾ ಸ್ವಂತ ಮಗುವನ್ನು ಚುಂಬಿಸುವುದು ಸಹಾ ಅಪರಾಧವೆನಿಸುತ್ತದೆ. ಸ್ವಲ್ಪ ಸಮಯ ವಾಯುವಿಹಾರ ಅಥವಾ ಯಾವುದಾದರೊಂದು ಮರದಡಿಯಲ್ಲಿ ಕುಳಿತು ಪ್ರಕೃತಿಯ ದೈವ ಸೃಷ್ಟಿಯ ಸೊಬಗನ್ನು ಅನುಭವಿಸುವುದು ಸಹಾ ಆ ದಿನವನ್ನು ಅಪವಿತ್ರಗೊಳಿಸುವಿಕೆ ಎನಿಸುತ್ತದೆ. ಈ ತಪ್ಪಾದ ವಿಚಾರಗಳಿಂದ ಹೊರಬರುವಾಗ ನಾವು ಅನೇಕರಂತೆ ಇತರ ಉಗ್ರವಾದ ಸಂಗತಿಗಳಿಗೆ ಬೀಳದಿರುವುದು ಒಳ್ಳೆಯದು. ಅನೇಕರು ಉಲ್ಲಾಸಕರ ವರ್ತನೆಗಳು, ಕ್ರೀಡೆಗಳು, ಲೌಕಿಕ ಸಂಗೀತಗಳು ಅಥವಾ ಬೇರೆಯ ದಿನಗಳಲ್ಲಿ ಮಾಡಬಹುದಾದ ಶ್ರಮಾ ಕೆಲಸಗಳು ಇತ್ಯಾದಿಗಳಲ್ಲಿ ತೊಡಗುತ್ತಾರೆ. ನೂತನ ಸೃಷ್ಟಿಯ ಮಕ್ಕಳು ವಿವೇಚನಾಪೂರಕವಾಗಿ ಸ್ವಸ್ಥಮನಸ್ಸಿನ ಸ್ಫೂರ್ತಿಯನ್ನು ಬಿಂಬಿಸುತ್ತಾರೆ. ಇದನ್ನು ದೇವರು ಅವರ ತಂದೆತಾಯಿಗಳಿಗೆ ಪವಿತ್ರಾತ್ಮನ ಮೂಲಕ ಮತ್ತು ಸತ್ಯ ವಾಕ್ಯಗಳ ಮೂಲಕ ವಾಗ್ದಾನಮಾಡಿದ್ದಾನೆ. ಮೊದಲನೆಯ ದಿನವನ್ನು ತರ್ಕಸಮ್ಮತವಾಗಿ, ಗೌರವಪೂರ್ಣವಾಗಿ ಒಂದು ವಿಶ್ರಾಂತಿ ದಿನವನ್ನಾಗಿ ಆಚರಿಸುವುದು, ಬೌದ್ಧಿಕ ಮತ್ತು ನೈತಿಕತೆಯ ಅಭಿವೃದ್ಧಿಯನ್ನು, ಕುಟುಂಬದಲ್ಲಿ ಮತ್ತು ಕರ್ತನ ಕುಟುಂಬ ಸದಸ್ಯರೊಳಗೆ ಸಾಮಾಜಿಕ ಒಡನಾಟವನ್ನುಂಟು ಮಾಡುವುದು– ನೂತನ ಸೃಷ್ಟಿಯು–ನಿಶ್ಚಿತವಾಗಿ ಸಂಬಂಧಪಟ್ಟವರಿಗೆಲ್ಲಾ ಆಶೀರ್ವಾದವನ್ನು ತರುವುದಾಗಿದೆ.

ಸಬ್ಬತ್ತು ದಿನವನ್ನು ಆಚರಿಸುವ ಮತ್ತೊಂದು ಸಮರ್ಥ ಅಭಿಪ್ರಾಯ ಏನೆಂದರೆ ಅಧಿಕಾರದ ಕಾನೂನುಗಳು. ಅನೇಕ ರಾಜ್ಯಗಳಲ್ಲಿ ಭಾನುವಾರದ ಬಗ್ಗೆ ಕೆಲವೊಂದು ನಿಯಮಗಳು, ಕಾಯ್ದೆಕಾನೂನುಗಳು ಬಳಕೆಯಲ್ಲಿವೆ. ಕರ್ತನ ಜನರು ಕಾನೂನುಗಳನ್ನು ಮತ್ತು ಅವರವರ ಆತ್ಮಸಾಕ್ಷಿಗೆ ಧಕ್ಕೆ ಉಂಟುಮಾಡದ ಸಂಗತಿಗಳನ್ನು ಪಾಲಿಸುವುದರಲ್ಲಿ ಇತರರಿಗಿಂತ ಮುಂದಿದ್ದಾರೆಯೇ ಹೊರತು ಹಿಂದಲ್ಲ. ಆದುದರಿಂದ ನಾಗರೀಕ ಆಡಳಿತವು ವಾರದಲ್ಲಿ ಎರಡು ಅಥವಾ ಮೂರು ಸಬ್ಬತ್ತನ್ನು ಆಚರಣೆಗೆ ತಂದರೆ ನೂತನ ಸೃಷ್ಟಿಯವರು ಅದನು ಆಚರಿಸಲೇಬೇಕು. ಈ ವ್ಯವಸ್ಥೆಯು ತಮ್ಮ ಆತ್ಮೀಕ ಅಭಿವೃದ್ಧಿಗೆ ಆಶಿರ್ವಾದದಾಯಕವಾಗಿದೆ ಮತ್ತು ಅದರ ಅವಕಾಶಗಳನ್ನು ಹೆಚ್ಚಿಸುತ್ತದೆ ಎಂದು ತಿಳಿಯಬೇಕು. ಆದರೆ ಅವುಗಳು ಲೌಕಿಕ ನೇಮಕವಾಗಿದ್ದು ದೈವಿಕ ಕಟ್ಟಳೆ ಆಗದಿರುವುದರಿಂದ ಅದನ್ನು ಬಲವಂತವಾಗಿ ಹೇರಿದ್ದರಲ್ಲಿ ಕಂಡು ಬರುವ ಲೌಕಿಕ ಅಂದಾಜಿಗಿಂತ ಮೀರಿ ಪಾಲಿಸಲು ತಾವು ಬದ್ಧರಾಗಿದ್ದೇವೆಂದು ಭಾವಿಸಬಾರದು.

## ಇಸ್ರಾಯೇಲ್ಯರ ಸಬ್ಬತ್ತು ಸಾಂಕೇತಿಕವಾದುದು

## Israel's Sabbath Typical

ಯೆಹೂದ್ಯ ಧರ್ಮಶಾಸ್ತ್ರದ ಹಂಗಿನಲ್ಲಿರುವ ಸಬ್ಬತ್ತನ್ನು ಸಿನಾಯಿ ಬೆಟ್ಟದಲ್ಲಿ ಇಸ್ರಾಯೇಲ್ಯರಿಗಲ್ಲದೆ ಬೇರಾವ ಜನಾಂಗಕ್ಕೂ ನೀಡಲಿಲ್ಲವೆಂಬುದನ್ನು ನಾವೀಗಾಗಲೇ

ಗಮನಿಸಿದ್ದೇವೆ. ಇದರ ಫಲವಾಗಿ ಅದು ಯೆಹೂದ್ಯರಿಗಷ್ಟೇ ನಿರ್ಭಂಧಿತವಾಯಿತು. ಇದರ ಮೊದಲನೆಯ ಆಚರಣೆಯು ಯೆಹೂದ್ಯರ ನಿಯಮವಾದ ಪಸ್ಕಹಬ್ಬದ ವಿಶಿಷ್ಟ ಆಚರಣೆಯ ನಂತರ ದೇವರ ವಾಕ್ಯದಲ್ಲಿ ದಾಖಲೆಯಾಗಿದೆ. ಇಸ್ರಾಯೇಲ್ಯರು ಐಗುಪ್ತದಿಂದ ಹೊರಟುಬಂದ ಮೇಲೆ ಅರಣ್ಯದಲ್ಲಿ ಸಂಚರಿಸುತ್ತಿದ್ದಾಗ ಅವರು ದಶಾಜ್ಞೆಗಳನ್ನು ಪಡೆಯುವಂತೆ ಸಿನಾಯಿ ಬೆಟ್ಟದ ಬಳಿ ಬರುವುದಕ್ಕೆ ಮುಂಚೆಯೇ ಮನ್ನವನ್ನು ಸಂಗ್ರಹಿಸಬೇಕಾದಾಗ ಅವರಿಗೆ ವಿಶ್ರಾಂತಿ ದಿನದ ಆಚರಣೆಯ ಬಗ್ಗೆ ಪ್ರಥಮ ಪಾಠವನ್ನು ನೀಡಲಾಯಿತು. ಅದೂವರೆಗೆ ಆದಾಮನಿಗಾಗಲೀ ಅಥವಾ ಹನೋಕನಿಗಾಗಲೀ ಅಥವಾ ನೋಹನಿಗಾಗಲೀ ಅಥವಾ ಅಬ್ರಹಾಮನಿಗಾಗಲೀ ಅಥವಾ ಇಸಾಕನಿಗಾಗಲೀ ಅಥವಾ ಯಾಕೋಬನಿಗಾಗಲೀ ಸಬ್ಬತ್ತಿನ ಆಚರಣೆಯ ಬಗ್ಗೆ ನೇರವಾಗಿ ಅಥವಾ ಪರೋಕ್ಷವಾಗಿ ಏನನ್ನೂ ಹೇಳಿರುವುದಿಲ್ಲ. ಸೃಷ್ಟಿಯ ಚರಿತ್ರೆಯಲ್ಲಿ ಒಮ್ಮೆ ಮಾತ್ರ "ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಆ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧದಿನವಾಗಲಿ ಎಂದು ಆಶೀರ್ವದಿಸಿದನು" (ಆದಿಕಾಂಡ 2:3) ಎಂದು ಸಬ್ಬತ್ತಿನ ಬಗ್ಗೆ ಹೇಳಿರುವುದನ್ನು ನಾವೀಗಾಗಾಲೆ ಕಂಡುಕೊಂಡಿದ್ದೇವೆ, ಆದರೆ ಇದು 24 ಘಂಟೆಗಳ ದಿನವಾಗಿರದೆ ಏಳು ಸಾವಿರ ವರ್ಷಗಳಿಂದ ಕೂಡಿದ ದಿನವಾಗಿತ್ತು.

ಇಸ್ರಾಯೇಲ್ಯರಿಗೆ ಏಳನೆಯ ದಿನದ ವಿಶ್ರಾಂತಿಯ ಬಗ್ಗೆ ಆಜ್ಞೆ ಕೊಡುವಾಗ ದೇವರು ತನ್ನ ದೊಡ್ಡ ಹಾಗೂ ವಿಶಾಲವಾದ ಪರಿಮಾಣದ ವಿಶ್ರಾಂತಿಯನ್ನು ಅವರ 24 ಘಂಟೆಗಳ ವಿಶ್ರಾಂತಿಗೆ ಸಮವಾಗಿ ಉದಾಹರಿಸಿದನು. ಇದು ನಮಗೆ ಆ ರೀತಿಯ ಊಹೆಗೆ ನಡೆಸುತ್ತದೆ. ಇದಲ್ಲದೆ ಇಸ್ರಾಯೇಲ್ಯರು ವಾರದ ವಿಶ್ರಾಂತಿಯಿಂದ ಹೊಂದಿಕೊಳ್ಳುವ ಯಾವುದೇ ಆಶೀರ್ವಾದವಲ್ಲದೆ ಇದರಲ್ಲಿ ನೂತನ ಸೃಷ್ಟಿಗೆ ಅನುಬಂಧವಾಗಿ ಒಂದು ಸಾಂಕೇತಿಕ ಪಾಠವಿದೆ. ನಿಜವಾಗಿಯೂ ಆ ಜನರ ಪ್ರತಿಯೊಂದು ಲಕ್ಷಣದಲ್ಲಿಯೂ ಮತ್ತು ಅವರ ಕಾನೂನುಗಳಲ್ಲಿಯೂ ನಮಗೊಂದು ಸಾಂಕೇತಿಕವಾದ ಪಾಠವು ಕಂಡುಬರುತ್ತದೆ.

ಧರ್ಮಶಾಸ್ತ್ರದಲ್ಲಿ ಏಳನೆಯ ದಿನ, ಏಳನೆಯ ತಿಂಗಳು ಮತ್ತು ಏಳನೆಯ ವರ್ಷ ಇವುಗಳೆಲ್ಲವೂ ಪ್ರಾಮುಖ್ಯ. ಏಳನೆಯ ದಿನವು ಶ್ರಮದಿಂದ ಮುಕ್ತಾಯಗೊಳ್ಳುವ ದಿನವಾಗಿದ್ದು ದೈಹಿಕ ವಿಶ್ರಾಂತಿಯ ದಿನವಾಗಿದೆ; ಏಳನೆಯ ತಿಂಗಳು ಪಾಪ ನಿವೃತ್ತಿಗೊಳಿಸುವುದಾಗಿದ್ದು ಈ ಕಾಲದಲ್ಲಿ ಬಹುಶಃ ಅವರು ಪಾಪದಿಂದ ವಿಶ್ರಾಂತಿ ಪಡೆಯುವವರಾಗಿದ್ದರು. ಏಳನೆಯ ವರ್ಷದಲ್ಲಿ ದಾಸತ್ವದಿಂದ, ಗುಲಾಮತನದಿಂದ ಬಿಡುಗಡೆಯುಂಟಾಯಿತು. ಇದಲ್ಲದೆ ನಾವೀಗಾಗಲೇ ಕಂಡುಕೊಂಡಂತೆ (ಸಂಪುಟ II ಅಧ್ಯಾಯ vi ನೋಡಿರಿ) ಏಳರಿಂದ ತನ್ನಷ್ಟಕ್ಕೇ ಗುಣಾಕಾರ ಹೊಂದುವುದು (7X 7 = 49) ಇದು 50ನೇ ಇಲ್ಲವೆ ಜ್ಯೂಬಿಲಿ ವರ್ಷಕ್ಕೆ ನಡೆಸುತ್ತದೆ. ಈ ಕಾಲದಲ್ಲಿ ಎಲ್ಲಾ ಅಡವುಗಳು (ಭೋಗ್ಯ) ಒತ್ತೆ ಇಟ್ಟ ವಸ್ತುವಿನ ಮೇಲೆ ಅಧಿಕಾರ, ವ್ಯಕ್ತಿಗಳ ಮತ್ತು ಜಮೀನುಗಳ ಮೇಲೆ ಕೈಕೊಂಡ ನಿರ್ಣಯ ಇವುಗಳೆಲ್ಲವೂ ಸಮಾಪ್ತಿಗೊಳ್ಳುತ್ತವೆ ಮತ್ತು ಎಲ್ಲಾ ಕುಟುಂಬಗಳಿಗೂ ತಮ್ಮ ಹಿಂದಿನ ತಪ್ಪುಗಳ ಭಾರದಿಂದ ಮುಕ್ತಿಗೊಳಿಸಿ ಅವರು ತಮ್ಮ ಸ್ವಂತ ಸ್ಥಳಕ್ಕೆ ಹಿಂತಿರುಗಲು ಅನುಮತಿ ದೊರೆಯುತ್ತದೆ. ಇಸ್ರಾಯೇಲ್ಯರ ಜೂಬಿಲಿ ವರ್ಷದ ಪ್ರತಿಛಾಯಾರೂಪವು ಸಹಸ್ರ ವರ್ಷಗಳ ಧರ್ಮಯುಗದ ರಾಜ್ಯವೆನಿಸುತ್ತದೆ ಎಂಬುದನ್ನು ನಾವೀಗಾಗಲೇ ನೋಡಿದ್ದೇವೆ. ದೇವರು ತನ್ನ ಪವಿತ್ರ ಪ್ರವಾದಿಗಳ ಮೂಲಕ ನುಡಿದ ಪುನರ್‌ಸ್ಥಾಪನೆಯ ಕಾಲವು ಇದೇ ಆಗಿದೆ. ಈ ಪ್ರತಿಛಾಯೆಯು ಬಹಳಷ್ಟು ವಿಶಾಲವಾಗಿದ್ದು ಸಾಮಾನ್ಯವಾಗಿ ಎಲ್ಲಾ ಮಾನವ ಕುಲಗಳನ್ನೂ ಒಳಗೊಂಡಿದೆ.

'ನಾವೀಗ ಪ್ರಾಮುಖ್ಯವಾದ ಮಾದರಿಯ ಏಳನೆ ದಿನದ ಬಗ್ಗೆ ನಿರ್ಧಿಷ್ಟವಾಗಿ ನೋಡೋಣ. ಏಳನೇ ವರ್ಷಕ್ಕೆ ಸಾದೃಶ್ಯವಾದ ದಿನವು (7X 7=49) ಐವತ್ತನೆಯ ಅಥವಾ ಜ್ಯೂಬಿಲಿ ದಿನಕ್ಕೆ ನಡೆಸುವಂತೆ ಅದು ಏಳನೆಯ ದಿನದ ಭಾವನೆಗಳನ್ನೇ ವ್ಯಕ್ತಪಡಿಸುತ್ತದೆ ಅಂದರೆ ವಿಶ್ರಾಂತಿ. ಆದರೆ ಅದಕ್ಕೆ ಪ್ರಾಶಸ್ತ್ಯ ಕೊಡುತ್ತದೆ.

ಆತ್ಮೀಕ ಇಸ್ರಾಯೇಲ್ಯರೆನಿಸಿಕೊಳ್ಳುವ ನೂತನ ಸೃಷ್ಟಿಗೆ ಸ್ವಾಭಾವಿಕ ಇಸ್ರಾಯೇಲ್ಯರ ಏಳನೇ ದಿನವಾದ ಸಬ್ಬತ್ತು ಅಥವಾ ವಿಶ್ರಾಂತಿ ದಿನದಿಂದ ದೊರೆಯುವ ಆಶೀರ್ವಾದವಾದರೂ ಏನು? ಅಪೋಸ್ತಲನು ಇದಕ್ಕೆ ಹೀಗೆ ಉತ್ತರಿಸುತ್ತಾನೆ. "ಹೀಗಿರಲಾಗಿ ದೇವರ ವಿಶ್ರಾಂತಿಯಲ್ಲಿ (ಸಬ್ಬತ್ತು) ಸೇರಬಹುದೆಂಬ ವಾಗ್ದಾನವು ಇನ್ನೂ ಇರುವಲ್ಲಿ ಯಾವನಾದರೂ ಆ ವಾಗ್ದಾನದ ಫಲವನ್ನು ಹೊಂದದೆ ತಪ್ಪುವವನಾದಾನೋ ಎಂದು ನಾವು ಭಯಪಡೋಣ... ನಂಬಿರುವ ನಾವಾದರೋ ಆ ವಿಶ್ರಾಂತಿಯಲ್ಲಿ (ಸಬ್ಬತ್ತಿನ ಆಚರಣೆಯಲ್ಲಿ) ಸೇರುತ್ತಲೇ ಇದ್ದೇವೆ... ಹೀಗಿರಲಾಗಿ ಆ ವಿಶ್ರಾಂತಿಯಲ್ಲಿ ಕೆಲವರು ಸೇರಬೇಕೆಂಬ ಮಾತು ಇನ್ನೂ ಇರುವುದರಿಂದಲೂ ಮೊದಲು ಶುಭವರ್ತಮಾನವನ್ನು ಕೇಳಿದವರು ಅವಿಧೇಯರಾದ ಕಾರಣ... ಆದದರಿಂದ ದೇವರ ಜನರು ಅನುಭವಿಸಲಿಕ್ಕಿರುವ ಸಬ್ಬತ್ತೆಂಬ ವಿಶ್ರಾಂತಿಯು ಇನ್ನೂ ಉಂಟು, ಹೇಗೆಂದರೆ ದೇವರು ತನ್ನ ಕೆಲಸಗಳನ್ನು ಮುಗಿಸಿ ಹೇಗೆ ವಿಶ್ರಮಿಸಿಕೊಂಡನೋ ಹಾಗೆಯೇ ಆತನ ವಿಶ್ರಾಂತಿಯಲ್ಲಿ ಸೇರುವವನು ಸಹ ತನ್ನ ಕೆಲಸಗಳನ್ನು ಮುಗಿಸಿ ವಿಶ್ರಮಿಸಿಕೊಂಡಿದ್ದಾನೆ. ಆದದರಿಂದ ನಾವು ಆ ವಿಶ್ರಾಂತಿಯಲ್ಲಿ ಸೇರುವುದಕ್ಕೆ ಪ್ರಯಾಸ ಪಡೋಣ; ನಮ್ಮಲ್ಲಿ ಒಬ್ಬನಾದರೂ ಅವರ ಅವಿಧೇಯತ್ವವನ್ನು ಅನುಸರಿಸುವವರಾಗಬಾರದು" (ಇಬ್ರಿಯ 4: 01–11) ಇಲ್ಲಿ ಅಪೋಸ್ತಲನು ನಮಗೆ ಎರಡು ರೀತಿಯ ಪಾಠವನ್ನು ಮುಂದಿಡುವವನಾಗಿದ್ದಾನೆ: (1) ವಿಶ್ರಾಂತಿಯಲ್ಲಿ ಸೇರುವುದು ನಮ್ಮ ಸೌಕರ್ಯ; ನಿಜವಾಗಿ ಹೇಳುವುದಾದರೆ ಆತನ ವಿಶ್ರಾಂತಿ ಪಡೆಯುತ್ತಾ ಆತನನ್ನು ನಂಬಿದವರು ಆ ರೀತಿಯಲ್ಲಿ ಸಬ್ಬತ್ತು ಅಥವಾ ವಿಶ್ರಾಂತಿಯ ಪ್ರತಿಸಂಕೇತವನ್ನು ಅಂದರೆ ನಂಬಿಕೆಯ ವಿಶ್ರಾಂತಿಯನ್ನು ಈ ಕಾಲದಲ್ಲಿ ಅನುಭವಿಸುತ್ತಾರೆ (2) ಈ ಪ್ರಸ್ತುತವಾದ ವಿಶ್ರಾಂತಿಯನ್ನು ಕಾಪಾಡಿಕೊಳ್ಳಲು ಮತ್ತು ನಿತ್ಯವಾದ ಸಬ್ಬತ್ತನ್ನು ಅಂದರೆ ಪರಲೋಕದ ರಾಜ್ಯದಲ್ಲಿ ದೊರೆಯುವ ದೇವ ಜನರಿಗಾಗಿರುವ ವಿಶ್ರಾಂತಿಯನ್ನು ಪ್ರವೇಶಿಸಲು ನಾವು ದೇವರ ಕೃಪೆಯಲ್ಲಿ ಮತ್ತು ನಿರಂತರವಾಗಿ ಆತನ ನಂಬಿಕೆ ಮತ್ತು ವಿಧೇಯತ್ವದಲ್ಲಿ ನೆಲೆಗೊಂಡಿರಬೇಕಾಗುತ್ತದೆ.

ನೂತನ ಸೃಷ್ಟಿಯ ಸದಸ್ಯರಿಗೆ ಅವರು ವಿಶ್ವಾಸಿಗಳ ವಿಶ್ರಾಂತಿಯನ್ನು ಯಾವಾಗ ಮತ್ತು ಎಲ್ಲಿ ಪ್ರವೇಶಿಸಿದರು ಮತ್ತು ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ ಶಾಂತಿಯು ಅವರ ಹೃದಯಗಳಲ್ಲಿ ಹೇಗೆ ಮತ್ತು ಯಾವಾಗ ಆಳತೊಡಗಿತು ಮತ್ತು ಅವರಲ್ಲಿರುವ ಪೂರ್ಣ ಭರವಸೆಯು ಎಲ್ಲಾ ಅಂಜಿಕೆ ಮತ್ತು ಅತೃಪ್ತಿಯನ್ನು ಹೊಡೆದೋಡಿಸಿತು ಎಂಬುದನ್ನು ಹೇಳುವ ಅಗತ್ಯವಿಲ್ಲ. ಕರ್ತನಾದ ಯೇಸುವನ್ನು ನಮ್ಮ ಮಹಾಯಾಜಕನೆಂದು ಅಂಗೀಕರಿಸಿಕೊಂಡಾಗಲೇ ಇದು ಪ್ರಾರಂಭವಾಯಿತು ಮತ್ತು ನಮ್ಮ ಎಲ್ಲಾ ಪಾಪಗಳೂ ನಮಗೋಸ್ಕರ ಬಲಿಯಾದ ವಿಮೋಚಕನಾದ ಆ ಮೆಸ್ಸೀಯನ ಅರ್ಹತೆಯ ಎಣಿಕೆಯಲ್ಲಿ ಮುಚ್ಚಿಹಾಕಲ್ಪಟ್ಟವು. ನಾವು ಆತನನ್ನು ನೂತನ ಸೃಷ್ಟಿಯ ಶಿರಸ್ಸು ಮತ್ತು ಅಬ್ರಹಾಮನ ವಾಗ್ದಾನದ ವಾರಸುದಾರನೆಂದು ಅಂಗೀಕರಿಸಿಕೊಂಡಾಗ ಮತ್ತು ನಮ್ಮನ್ನು ಆಶೀರ್ವಾದದಾಯಕ ರಾಜ್ಯದಲ್ಲಿ ಆತನೊಂದಿಗೆ ಜೊತೆವಾರಸುದಾರರಾಗುವಂತೆ ದೇವರಿಂದ ಕರೆಯಲ್ಪಟ್ಟವರು ಎಂದು ಗ್ರಹಿಸಿಕೊಂಡಾಗಲೇ ಅದು ಹೆಚ್ಚಾಯಿತು. ಇಕ್ಕಟ್ಟಿನ ಮಾರ್ಗದಲ್ಲಿ ಆತನ ರಾಜ್ಯಕ್ಕೆ ನಮ್ಮನ್ನು ನಡೆಸಲು ನಾವು ಸಂತೋಷದಿಂದ ಒಪ್ಪಿಕೊಂಡು ನಮ್ಮದೆಲ್ಲವನ್ನು ಆತನಿಗೆ ಅರ್ಪಿಸಿದಾಗಲೇ ಸಮರ್ಪಕವಾದ ವಿಶ್ರಾಂತಿ ಅಥವಾ ಸಬ್ಬತ್ತಿನ ಆನಂದವು ಬಂತು. ಅಲ್ಲಿ ನಾವು ನಮ್ಮ ಸ್ವಂತ ಕೆಲಸಗಳಿಂದ ಮತ್ತು ನಮ್ಮನ್ನು ಸಮರ್ಥಿಸಿಕೊಳ್ಳುವ ಎಲ್ಲಾ ಪ್ರಯತ್ನಗಳಿಂದ ವಿಶ್ರಾಂತಿ ಪಡೆದು ನಮ್ಮ ಅಸಮರ್ಪಕತೆ ಮತ್ತು ಅಯೋಗ್ಯತೆಗಳನ್ನು ಮತ್ತು ನಮ್ಮನ್ನು ನಾವೇ ಯೋಗ್ಯರಾಗಿಸಿಕೊಳ್ಳುವ ಅಸಮರ್ಥತೆಯನ್ನು ಆತನಿಗೆ ಅರಿಕೆಮಾಡುತ್ತೇವೆ. ಆಗ ನಾವು ದೇವರು ನಮಗೆ ಕ್ರಿಸ್ತ ಯೇಸುವಿನ ವಿಮೋಚನೆಯ ಮೂಲಕ ತೋರಿಸಿದ ಕರುಣೆಯನ್ನು ಮತ್ತು ಎಲ್ಲಾ ಅಗತ್ಯತೆಗಳಲ್ಲಿ ನಮಗೆ ಸಹಾಯ ಮಾಡುವ ಆತನ ವಾಗ್ದಾನವನ್ನು ಕೃತಜ್ಞತಾ ಪೂರ್ವಕವಾಗಿ ಒಪ್ಪಿಕೊಳ್ಳುತ್ತೇವೆ ಮತ್ತು ಕ್ರಿಸ್ತನ ಶಿಷ್ಯರೂ ಆತನ ಹೆಜ್ಜೆಜಾಡಿನಲ್ಲಿ ಮರಣಪರ್ಯಂತ ನಡೆಯುವ ಆತನ ಹಿಂಬಾಲಕರೂ ಆಗುವುದನ್ನು ವಹಿಸಿಕೊಳ್ಳುತ್ತೇವೆ.

ದೇವರು ತನ್ನ ಕೆಲಸಗಳಿಂದ ವಿಶ್ರಾಂತಿ ಪಡೆದಂತೆ ನಾವು ಸಹಾ ವಿಶ್ರಾಂತಿಯನ್ನು ಪ್ರವೇಶಿಸುತ್ತೇವೆಂದು ಅಪೋಸ್ತಲನು ಪ್ರಕಟಿಸುತ್ತಾನೆ. ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದ ಮೇಲೆ ವಿಶ್ರಮಿಸಿಕೊಂಡನೆಂದು ನಾವೀಗಾಗಲೇ ನೋಡಿದ್ದೇವೆ. ಅಂದಿನಿಂದ ಆತನು ಪಾಪ ಮತ್ತು ಮರಣವು ತನ್ನ ಉತ್ತಮವಾದ ಸೃಷ್ಟಿಯನ್ನು ಹಾನಿಗೊಳಿಸಲು ಅನುಮತಿ ನೀಡಿದನು; ಇನ್ನೂ ಆತನು ಆ ಕಾರ್ಯವು ಮುಂದುವರೆಯುವುದನ್ನು ತಡೆಗಟ್ಟಲು ತನ್ನ ಬಲಶಾಲಿ ತೋಳುಗಳನ್ನು ಎತ್ತಿಲ್ಲ ಅಥವಾ ಮಹಾ ಮೋಸಗಾರನಾದ ಸೈತಾನನ್ನು ಬಂಧಿಸಿಲ್ಲ ಅಥವಾ ತಡೆದಿಲ್ಲ. ದೇವರು ವಿಶ್ರಮಿಸುತ್ತಿದ್ದಾನೆ, ಎಲ್ಲಾ ಸಂಗತಿಗಳನ್ನು ಮೆಸ್ಸೀಯನೇ ಪೂರೈಸುವಂತೆ ಕಾಯುತ್ತಿದ್ದಾನೆ. ಕ್ರಿಸ್ತನು ದೇವರಿಂದ ಅಭಿಷೇಕಿಸಲ್ಪಟ್ಟವನು ಮತ್ತು ಈ ಎಲ್ಲಾ ಕಾರ್ಯಗಳನ್ನು ನೆರವೇರಿಸಲು ಸಂಪೂರ್ಣವಾದ ಅಧಿಕಾರವನ್ನು ಹೊಂದಿದವನೆಂದು ಗ್ರಹಿಸುವಾಗ ನಾವು ನಂಬಿಕೆಯಿಂದ ದೇವರ ವಿಶ್ರಾಂತಿಯಲ್ಲಿ ಸೇರುವೆವು. ಇದು ನೂತನ ಸೃಷ್ಟಿಗಳೂ, ಆತನ ದೇಹದ ಅಂಗಗಳೂ ಅದ ನಮಗಾಗಿ ಮಾತ್ರವೇ ಅಲ್ಲ ಆದರೆ ಆತನ ಮೂಲಕ ದೇವರ ಕೃಪೆಯನ್ನು ಅಂಗೀಕರಿಸುವ ಎಲ್ಲಾ ಮಾನವ ಕುಲದ ಆಶೀರ್ವಾದ ಮತ್ತು ಸಂಧಾನದ ಕಾರ್ಯವಾಗಿದೆ.

ನೂತನ ಸೃಷ್ಟಿಯ ಸದಸ್ಯರುಗಳಾದ ನಾವು ವ್ಯಕ್ತಿಗತವಾಗಿ ನಮ್ಮ ವಿಶ್ರಾಂತಿಯು ಎಲ್ಲಿ ಪ್ರಾರಂಭವಾಯಿತೆಂದು ಸ್ಪಷ್ಟವಾಗಿ ನೋಡುತ್ತೇವೆ. ಆದರೆ ಸಮಸ್ತ ನೂತನ ಸೃಷ್ಟಿಗೆ ಈ ವಿಶ್ರಾಂತಿಯು ಪ್ರಾರಂಭವಾದುದನ್ನು ಹಿಂತಿರುಗಿ ನೋಡುವಾಗ ನಮಗೆ ಹೆಚ್ಚು ಲಾಭವಾಗುತ್ತದೆ. ಅಪೋಸ್ತಲರು ತಮ್ಮ ಕರ್ತನು ದೇಹಧಾರಿಯಾಗಿ ಅವರೊಡನೆ ಇದ್ದಾಗ ಸ್ವಲ್ಪ ಮಟ್ಟಿನ ವಿಶ್ರಾಂತಿಯನ್ನು ಅನುಭವಿಸಿದರಾದರೂ ಅದು ಪೂರ್ಣವಾದ ವಿಶ್ರಾಂತಿಯಾಗಿರಲಿಲ್ಲ ಎಂಬುದನ್ನು ನಾವು ನೋಡಿದ್ದೇವೆ. ಮದಲಿಂಗನು ಅವರ ಸಂಗಡ ಇದ್ದ ಕಾರಣ ಅವರು ಆನಂದಪಟ್ಟರು. ಅವರು ಆತನ ಪ್ರೀತಿ ಮತ್ತು ಸೇವೆಯ ಉದ್ದ ಅಗಲವನ್ನು ಅರ್ಥಮಾಡಿಕೊಳ್ಳದಿದ್ದರೂ ಆತನಲ್ಲಿ ಆನಂದಿಸಿದರು. ಆದರೆ ಒಡೆಯನು ಸತ್ತಾಗ ಅವರ ವಿಶ್ರಾಂತಿ, ಸಂತೋಷ ಮತ್ತು ಶಾಂತಿಯು ಮುರಿದುಬಿತ್ತು. ಅವರ ಈ ಆಶಾಭಂಗಕ್ಕೆ ಕಾರಣವನ್ನು ಅವರ ಭಾಷೆಯಲ್ಲಿಯೇ ಹೀಗೆ ನೋಡಬಹುದು –"ಈತನೇ ಇಸ್ರಾಯೇಲ್ಯರನ್ನು ಬಿಡಿಸುವವನು ಎಂದು ನಾವು ನಂಬಿದ್ದೆವು" ಆದರೆ ನಿರಾಶೆಯಾಯಿತು! ಆದರೆ ಆತನು ಸತ್ತವರೊಳಗಿಂದ ಪುನರುತ್ಥಾನ ಹೊಂದಿ ಅವರ ಮುಂದೆ ಕಾಣಿಸಿಕೊಂಡು ತಾನು ಪುನರುತ್ಥಾನ ಹೊಂದಿದ್ದನ್ನು ಋಜುವಾತುಪಡಿಸಿದಾಗ ಅವರ ಎಲ್ಲಾ ನಿರಾಶೆ ಮತ್ತು ಅನುಮಾನಗಳು ಮಾಯವಾಗಿ ನಿರೀಕ್ಷೆಗೆ ಎಡೆಮಾಡಿಕೊಟ್ಟವು. ಆದರೂ ಅವರ ಸಂತೋಷ ಮತ್ತು ಶಾಂತಿಯು ಪೂರ್ಣ ಪ್ರವಾಹದಲ್ಲಿ ಹಿಂತಿರುಗಿ ಬರಲಿಲ್ಲ. ಅವರು ಕಳವಳಗೊಂಡಿದ್ದರು. ಹೀಗಿದ್ದಾಗ್ಯೂ ಅವರು ದೇವರು ಮೇಲಣ ಲೋಕದಿಂದ ಶಕ್ತಿಯನ್ನು ಹೊದಿಸುವ ತನಕ ಯೆರೂಸಲೇಮಿನಲ್ಲೇ ಕಾದುಕೊಂಡಿರ್ರಿ ಎಂಬ ಆತನ ಎಚ್ಚರಿಕೆಯ ಮಾತುಗಳನ್ನು ಆಲಿಸಿದರು.

ಅವರು ನಿರೀಕ್ಷೆಯಿಂದ ಕಾದರು – ಎಷ್ಟು ದಿನಗಳ ತನಕ? ನಮ್ಮ ಉತ್ತರವೆಂದರೆ ಅವರು ಏಳು ದಿನಗಳ ಏಳರಷ್ಟು ದಿನಗಳು ಅಂದರೆ 7X7= 49 (ನಲ್ವತ್ತೊಂಬತ್ತು) ದಿನಗಳು ಮತ್ತು ಆ ದಿನದ ನಂತರ ಒಂದು ದಿನ ಅಂದರೆ ಒಟ್ಟು ಐವತ್ತು ದಿನಗಳವರೆಗೆ ಕಾದರು. ಅದು ಜ್ಯೂಬಿಲಿ ಸಬ್ಬತ್ ದಿನವಾಗಿತ್ತು. ದೇವರು ಅವರಿಗೆ ತನ್ನ ಕೃಪಾಶೀರ್ವಾದಗಳನ್ನು ಪೂರೈಸಿದನು ಮತ್ತು ಯಾರು ಯೇಸುವನ್ನು ಅಂಗೀಕರಿಸಿದರೋ ಅವರಿಗೆ ವಿಶ್ರಾಂತಿಯನ್ನು ಅಂದರೆ ನೂತನ ಸೃಷ್ಟಿಯ ಮೇಲಾದ ಸಬ್ಬತ್ತಿನ ಆಚರಣೆಯನ್ನು ಅನುಗ್ರಹಿಸಿದನು. ಅವರು "ಯೇಸುಕ್ರಿಸ್ತನ ಮೂಲಕ ಶಾಂತಿ" ಎಂದು ಹೇಳುವ ಪಂಚಾಶತ್ತಮ ದಿನದ ಆಶೀರ್ವಾದವನ್ನು ಪಡಕೊಳ್ಳುವುದರ ಮೂಲಕ ಆತನ ವಿಶ್ರಾಂತಿಯಲ್ಲಿ ಪ್ರವೇಶಿಸಿದರು. ಯೇಸುಕ್ರಿಸ್ತನು ಪಾಪಿಗಳಿಗೋಸ್ಕರ ಪ್ರಾಣತೆತ್ತ ನಂತರ ಪರಲೋಕಕ್ಕೆ ಏರಿಹೋಗಿ ಅವರ ಕಣ್ಣಗಳಿಗೆ ಮಾಯವಾದನಾದರೂ ಆತನು ಯೆಹೋವನಿಂದ ಅಂಗೀಕರಿಸಲ್ಪಟ್ಟನು ಮತ್ತು ಆತನ ಬಲಿಯನ್ನು ಪಾಪಗಳ ನಿವಾರಣಾರ್ಥ ಅಂಗೀಕರಿಸಲಾಯಿತು. ಆದುದರಿಂದ, ಆತನು ನೆರವೇರಿಸಿದ ಈ ಕಾರ್ಯದ

ಅರ್ಹತೆಯಲ್ಲಿ ಅವರು ವಿಶ್ರಮಿಸಬಹುದು – ದೇವರ ಎಲ್ಲಾ ವಾಗ್ದಾನಗಳೂ ಆತನಲ್ಲಿ ಮತ್ತು ಆತನ ಮೂಲಕ ಹೌದು ಮತ್ತು ಆಮೆನ್ ಆಗುವುದು ಎಂಬುದು ಸುನಿಶ್ಚಿತ. ಅವರ ಸ್ವಂತ ಪಾಪಗಳಿಗೆ ದೇವರಲ್ಲಿ ಕ್ಷಮಾಪಣೆಯೂ ಸುನಿಶ್ಚಿತ. ಯೇಸುಕ್ರಿಸ್ತನಲ್ಲಿ ಕೇಂದ್ರೀಕೃತಗೊಂಡ ಎಲ್ಲಾ ಅಮೂಲ್ಯ ವಾಗ್ದಾನಗಳೂ ನೆರವೇರುವುವು ಎಂಬುದನ್ನು ಸಹಾ ಇದು ಖಚಿತಪಡಿಸುತ್ತದೆ. ದೇವರ ಕೃಪೆಯು ಅವರ ಹೃದಯಗಳನ್ನು ಚೆನ್ನಾಗಿ ಸಂಸ್ಕರಿಸಿದ ನಂತರ ಅವರು ತಮ್ಮ ಒಪ್ಪಂದ ಪಾತ್ರಕ್ಕೆ ನಿಷ್ಠೆಯಿಂದ ಇದ್ದೇವೆಂದು ಸಾಬೀತುಪಡಿಸಿದಲ್ಲಿ ಅವರು ಭವ್ಯವಾದ ಭಾಗವನ್ನು ಹಂಚಿಕೊಳ್ಳಬಹುದು ಮತ್ತು ತಾವು ಕ್ರಿಸ್ತನಲ್ಲಿ ನೆಲೆಗೊಳ್ಳುವುದರ ಮೂಲಕ ಮತ್ತು ದೇವರ ಚಿತ್ತಕ್ಕೆ ವಿಧೇಯರಾಗುವುದರ ಮೂಲಕ ತಮ್ಮ ಕರೆ ಮತ್ತು ಆಯ್ಕೆಯನ್ನು ಖಚಿತ ಪಡಿಸಿಕೊಳ್ಳಬಹುದು.

ಆಗ ಪರಿಶುದ್ಧಾತ್ಮನನ್ನು ಹೊಂದಿಕೊಂಡ ಎಲ್ಲಾ ನೂತನ ಸೃಷ್ಟಿಯೂ ವಿಶ್ರಾಂತಿಯ ಪ್ರತಿಸಂಕೇತವನ್ನು ಪ್ರವೇಶಿಸಬಹುದು ಮತ್ತು ಇನ್ನು ಮುಂದೆ ಏಳನೆಯ ದಿನದ ದೈಹಿಕ ವಿಶ್ರಾಂತಿಯನ್ನು ಪಡಕೊಳ್ಳುವ ಬದಲು ಹೃದಯದ, ಮನಸ್ಸಿನ ಮತ್ತು ದೇವ ಕುಮಾರನಲ್ಲಿರುವ ನಂಬಿಕೆಯ ಒಂದು ಚಿರಸ್ಥಾಯಿಯಾದ ವಿಶ್ರಾಂತಿಯನ್ನು ಅವರೀಗ ಅನುಭವಿಸುತ್ತಾರೆ. ಆದರೆ, ನಂಬಿಕೆಯ ಈ ವಿಶ್ರಾಂತಿಯೇ ಅಂತ್ಯವಲ್ಲ – ಪೂರ್ಣ ಪ್ರತಿಸಂಕೇತವೂ ಅಲ್ಲ. ನಂತರ ಸಂತೋಷದಿಂದ ತಮ್ಮ ಓಟವನ್ನು ಮುಗಿಸುವ ಎಲ್ಲಾ ದೇವಜನರಿಗೋಸ್ಕರ ಉಳುಕೊಳ್ಳುವ ಭವ್ಯವಾದ ವಿಶ್ರಾಂತಿಯು ಅಂತ್ಯದಲ್ಲಿ ಬರುತ್ತದೆ. ಇದೇ ಸಮಯದಲ್ಲಿ ನಂಬಿಕೆಯ ವಿಶ್ರಾಂತಿಯು ಮುಂದುವರಿಯಲೇಬೇಕು. ಯಾಕೆಂದರೆ ಇದು ನಮಗೆ ಇನ್ನೂ ಮುಂದಕ್ಕೆ ದೊರೆಯುವ ಪ್ರಮಾಣಿಕವಾದ ಭರವಸೆಯಾಗಿದೆ. ಅದರ ಕಾಪಾಡಿಕೊಳ್ಳುವಿಕೆಗೆ ಅಲೋಚನೆಯ, ಮಾತುಗಳ ಮತ್ತು ಕಾರ್ಯದ ಸಾಮರ್ಥ್ಯಕ್ಕನುಸಾರವಾದ ವಿಧೇಯತೆಯು ಮಾತ್ರವಲ್ಲ ದೇವರ ಕೃಪೆಯ ಮೇಲಿನ ನಂಬಿಕೆಯೂ ಸಹಾ ಅಗತ್ಯವಾಗಿದೆ. ಈ ರೀತಿಯಲ್ಲಿ ನಾವು ದೇವರಲ್ಲಿಯೂ ಆತನ ಮಹಾಶಕ್ತಿಯಲ್ಲಿಯೂ ಬಲಗೊಂಡವರಾಗಿ ಆತನ ಹೆಜ್ಜೆಜಾಡಿನಲ್ಲಿ ನಡೆಯಬಹುದು. ನಮ್ಮನ್ನು ಜಯಶಾಲಿಗಳಿಗಿಂತಲೂ ಹೆಚ್ಚಾಗುವಂತೆ ಮಾಡಲು ಆತನು ಶಕ್ತನಾಗಿದ್ದಾನೆ ಮತ್ತು ಜ್ಯೂಬಿಲಿಯ ಪ್ರತಿಸಂಕೇತದ ಕಾರ್ಯದಲ್ಲಿ ನಮ್ಮನ್ನು ಭಾಗಿಗಳನ್ನಾಗಿಮಾಡುವಂತೆ ದಯಪಾಲಿಸಲು ಆತನು ಶಕ್ತನೂ ಹಾಗೂ ಇಚ್ಛೆಯುಳ್ಳವನೂ ದಯಪಾಲಿಸುವವನೂ ಆಗಿದ್ದಾನೆ ಎಂಬುದು ನಮ್ಮ ವಿಶ್ರಾಂತಿ ಮತ್ತು ವಿಶ್ವಾಸವಾಗಿರಬೇಕು. ■

* * * * * *